ಎಲ್ಲರೂ ಸೇರಿ ಆ ನಿರ್ಣಯವನ್ನು ಮಂಡನೆ ಮಾಡೋಣ. ಈಗ ಕಾಲು ಗಂಟೆ ಸಭೆಯನ್ನು ಮುಂದಕ್ಕೆ ಹಾಕಿದ್ದೇನೆ.

(ಸಭೆಯು ಮತ್ತೆ 6.00 ನಿಮಿಷಕ್ಕೆ ಸಮಾವೇಶಗೊಂಡಿತುಪೀಠದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಉಪಸ್ಥಿತರಿದ್ದರು)

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು : ಮಾನ್ಯ ಸಭಾನಾಯಕರು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಬಹುದು.

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಭಾರತದ ಅದ್ವಿತೀಯ ಸ್ವಾತಂತ್ರ್ಯ ಹೋರಾಟಗಾರ, ಗಾಂಧೀವಾದಿ ಅಪ್ರತಿಮ ಸ್ವಾಭಿಮಾನಿ, ಸ್ವಾತಂತ್ರ್ಯ ಪ್ರೇಮಿ ಹಾಗೂ ಮಾಜಿ ಪ್ರಧಾನಿಯಾಗಿದ್ದ ಶ್ರೀ ಮೊರಾರ್ಜಿ ದೇಸಾಯಿ ಅವರು ಇಂದು ಮಧ್ಯಾಹ್ನ ಮುಂಬಯಿಯಲ್ಲಿ ನಿಧನರಾದ ಸುದ್ದಿಯನ್ನು ಅತೀತ ನೊಂದ ಮನಸ್ಸಿನಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ.

ಭಾರತದ ಮಹಾನ್ ನಾಯಕರಲ್ಲಿ ಒಬ್ಬರಾದ ಮೊರಾರ್ಜಿ ಅವರ ಶತಮಾನೋತ್ಸವ ಮಾರ್ಚ್ 1ರಂದು ಆರಂಭವಾಗಿತ್ತು. ಈ ಉತ್ಸವ ಆಚರಣೆಯ ಕಾಲದಲ್ಲಿ ಸ್ವಲ್ಪ ದಿನಗಳಾದರೂ ಅವರು ನಮ್ಮೊಡನೆ ಇದ್ದರು ಎಂಬುದೇ ನಮಗೆ ಸ್ವಲ್ಪ ಸಮಾಧಾನಕರವಾದ ಸಂಗತಿ. ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಅತ್ಯಂತ ಶ್ರಮದಿಂದ ವಿದ್ಯಾಭ್ಯಾಸ ಮಾಡಿ, ಸ್ವಾತಂತ್ರ್ಯ ಪೂರ್ವದ ಮುಂಬಯಿ ಪ್ರಾಂತ್ಯದಲ್ಲಿ ಸರ್ಕಾರಿ ಸೇವೆಗೆ ಸೇರಿದರು. ಆ ಕಾಲದಲ್ಲಿಯೇ ಅವರು ದಕ್ಷತೆಗೆ ಮತ್ತು ಪ್ರಾಮಾಣಿಕತೆಗೆ ಹೆಸರುವಾಸಿಯಾಗಿದ್ದರು. ಯುವಕರಾಗಿದ್ದಾಗಲೇ ರಾಷ್ಟ್ರದ ಸ್ವಾತಂತ್ರ್ಯ ಗಳಿಕೆಯ ತವಕವಿದ್ದ ಶ್ರೀ ಮೊರಾರ್ಜಿ ದೇಸಾಯಿಯವರು 1930 ರಲ್ಲಿ ತಮ್ಮ ಸರ್ಕಾರಿ ಹುದ್ದೆಗೆ ರಾಜೀನಾಮೆ ನೀಡಿ, ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಅನೇಕ ಬಾರಿ ಕಾರಾಗೃಹ ವಾಸವನ್ನು ಅನುಭವಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಮುಂಬೈ ಪ್ರಾಂತ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದರು. 1952 ರಲ್ಲಿ ಹಿಂದಿನ ಮುಂಬೈ ಪ್ರಾತ್ಯದ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದರು. ಲೋಕಸಭೆ ಸದಸ್ಯರಾಗಿ, ಕೇಂದ್ರದಲ್ಲಿ ಅರ್ಥ ಸಚಿವರಾಗಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ, ಉಪ ಪ್ರಧಾನಿಯಾಗಿ ಹಾಗೂ ಪ್ರಧಾನಿಯಾಗಿ ರಾಷ್ಟ್ರದ ಸೇವೆ ಸಲ್ಲಿಸಿರುವ ಮುರಾರ್ಜಿಯವರು ಶಿಸ್ತು ಹಾಗೂ ಪ್ರಮಾಣಿಕತೆಗೆ ಇತ್ತರರಿಗೆ ಮಾದರಿಯಾಗಿದ್ದರು. ಶ್ರೀ ಮುರಾರ್ಜಿಯವರು ಸ್ವಾತಂತ್ರ್ಯ ಹೋರಾಟಗಾರರಾಗಿ ಸಚಿವರಾಗಿ ಹಾಗೂ ಪ್ರಧಾನಿಯಾಗಿ ಸೇವೆ ಸಲ್ಲಿಸುವ ಕಾಲದಲ್ಲೂ ಇತರ ನಾನಾ ಸಾಮಾಜಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಿದ್ದರು. ಗಾಂಧಿ, ಕಸ್ತೂರಿಬಾ, ಜವಹರಲಾನ್ ನೆಹರು, ಲಾಲ್‌ಬಹದ್ದೂರ್ ಶಾಸ್ತ್ರಿ, ಪಂಡಿತ ಪಂಥ್ ಹಾಗೂ ಸೋಮನಾಥ ಸ್ಮಾರಕ ದತ್ತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಶಕ್ತಿ ಇರುವವರೆಗೂ ಚರಕದಿಂದ ನೂಲು ತೆಗೆಯುವುದು ಅವರ ಹವ್ಯಾಸವಾಗಿತ್ತು. ಶ್ರೀ ಮೊರಾರ್ಜಿಯವರು ಶ್ರೇಷ್ಠ ಸಂಸದೀಯ

ಪಟುವಾಗಿದ್ದರು. ವಿಷಯಗಳ ಮಂಡನೆ, ಉನ್ನತ ಮಟ್ಟದ್ದು ಚರ್ಚೆ ಆಗಾಗ್ಗೆ ತೂರಿ ಬರುತ್ತಿದ್ದ ವಿನೋದ ವ್ಯಂಗ್ಯಗಳಿಗೆ ಮೊರಾರ್ಜಿಯವರು ಮಾದರಿಯಾಗಿದ್ದರು.

ಧ್ಯೇಯೋದ್ದೇಶಗಳನ್ನು ಸಾಧಿಸುವ ಕಾರ್ಯದಲ್ಲಿ ಪಟ್ಟು ಹಿಡಿದು ಕೆಲಸ ಮಾಡುವ ಪ್ರವೃತ್ತಿ ಇದ್ದ ಮೊರಾರ್ಜಿ ದೇಸಾಯಿಯವರನ್ನು ಹಠವಾಡಿ ಎಂದು ಕರೆಯಲಾಗುತ್ತಿತ್ತು.

''ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳದಿದ್ದರೆ ನಾನು ಹಠವಾದಿ ಎಂದೇ ಭಾವಿಸಲಾಗುತ್ತದೆ'' ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಈ ಸ್ನೇಹಮಯ ಟೀಕೆಗೆ ಉತ್ತರವಿತ್ತಿದ್ದಾರೆ.

ಭಾರತದ ಈ ಅಪೂರ್ವ ಮತ್ತು ಹಿರಿಯ ನಾಯಕರ ಸೇವೆಯನ್ನು ಸ್ಮರಿಸಿ ಅವರಿಗೆ ಇತ್ತೀಚೆಗೆ ಭಾರತದ ರಾಷ್ಟ್ರಪತಿಗಳು ''ಭಾರತ ರತ್ನ'' ಪ್ರಶಸ್ತಿಯನ್ನು ನೀಡಿದ್ದರು.

ರಾಷ್ಟ್ರದ ರಾಜಕೀಯದಲ್ಲಿ ಉಚ್ಚರವಿಳಿತಗಳಿದ್ದರೂ, ಬದಲಾವಣೆಗಳಾದರೂ ತಮ್ಮ ನಿಲುವಿನ ಬಗ್ಗೆ ರಾಜಿ ಮಾಡಿಕೊಳ್ಳದೆ ಅಗ್ರ ನಾಯಕರಾಗಿ ಮೆರೆದ ಶ್ರೀ ಮೊರಾರ್ಜಿ ದೇಸಾಯಿಯವರ ನಿಧನದಿಂದ ರಾಷ್ಟ್ರಕ್ಕೆ ಅಪಾರ ನಷ್ಟವುಂಟಾಗಿದೆ. ಇವರ ಆದರ್ಶ ಜೀವನ ನಮ್ಮ ರಾಷ್ಟ್ರದ ಸಾರ್ವಜನಿಕ ಜೀವನ ಕ್ಷೇತ್ರಕ್ಕೆ ಎಂದೂ ಮಾದರಿಯಾಗಲಿ ಎಂದು ನಾನು ಆಶಿಸುತ್ತೇನೆ.

* ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಮಹಾನ್ ಮಾನವತಾವಾದಿ, ಗಾಂಧೀವಾದಿ, ಆಡಿದ್ದನ್ನು ಮಾಡಿ ತೋರಿಸುತ್ತಿದ್ದಂಥ ಒಬ್ಬ ಹಠವಾದಿ ಮೊರಾರ್ಜಿಯವರು ಇವತ್ತು ಸ್ವರ್ಗಸ್ಥರಾಗಿ ಈ ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ. ಬಹುಶಃ ಅವರು ಪ್ರಧಾನಿಯಾಗಿದಂಥ ಕಾಲ ಈ ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಂಥ ಕಾಲ. ಸಾಮಾನ್ಯ ಜನರಿಗೆ ಸಾಮಾನ್ಯ ವಸ್ತುಗಳು ಕಡಿಮೆ ದರದಲ್ಲಿ ಸಿಗುವುದಕ್ಕೆ ತುಂಬಾ ಪ್ರಯತ್ನ ಮಾಡಿದಂಥ ವ್ಯಕ್ತಿ. ಈ ದೇಶದಲ್ಲಿ ಪಾನ ನಿಷೇಧವನ್ನು ಜಾರಿಗೆ ತರಬೇಕು ಎಂದು ಹೋರಾಟ ಮಾಡಿದಂಥ ಮಹಾನ್ ವ್ಯಕ್ತಿ. ಲ್ಯಾಂಡ್ ರಿಫಾರ್ಮ್ಸ್ ಕ್ಯಾಕ್ಟನ್ನು ಜಾರಿಗೆ ತರುವುದರಲ್ಲಿ ಮೊದಲಿಗರು. ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈಗ ತಾನೆ ಜೆ.ಹೆಚ್.ಪಟೇಲ್‌ರವರ ಜೊತೆಗೆ ಒಳಗಡೆ ಕುಳಿತು ಮಾತನಾಡುತ್ತಿರಬೇಕಾದರೆ, ಅಂದಿನ ಐ.ಸಿ.ಎಸ್.ಪರೀಕ್ಷೆಯನ್ನು ಮಾಡಿ ಸರ್ಕಾರಿ ಉದ್ಯೋಗದಲ್ಲಿದಂಥ ಒಬ್ಬ ಮಹಾನ್ ವ್ಯಕ್ತಿ. ನೂರು ವರ್ಷಕ್ಕೆ ಕಾಲಿಟ್ಟರೂ ಸಹ ಬೆನ್ನುಬಾಗದೆ ನೇರವಾಗಿ ನಡೆಯುತ್ತಿದ್ದು, ಆರೋಗ್ಯವನ್ನು ಕಾಪಾಡಿಕೊಂಡು ಬಂದಂಥ ವ್ಯಕ್ತಿ. ಈ ದೇಶಕ್ಕೆ ತುರ್ತುಪರಿಸ್ಥಿತಿ ಬಂದಂಥ ಸಂದರ್ಭದಲ್ಲಿ ಅವರಿಗೆ ಲೋಕನಾಯಕರಾದ ಜಯಪ್ರಕಾಶ್ ನಾರಾಯಣ್‌ರೊಡಗೂಡಿ ಹೋರಾಟ ಮಾಡಿದಂಥ ಒಬ್ಬ ಮಹಾನ್ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅವರು ಪ್ರಧಾನಿಯಾಗುವುದಕ್ಕೆ ಮುಂಚೆ ನಡೆದಂಥ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಗೆ ಪ್ರವಾಸ ಮಾಡಿದಂಥ ಕಾಲದಲ್ಲಿ ಅವರ ಹತ್ತಿರ ಇದ್ದು ಮಾತನಾಡುವ ಅವಕಾಶ ಸಹ ನನಗೆ ಸಿಕ್ಕಿತ್ತು. ಬಹುಶಃ ಇಂತಹ ಸಂದರ್ಭದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ. ಆದರೆ ಯಾವ ಒಂದು ಉದ್ದೇಶವನ್ನು

ಇಟ್ಟುಕೊಂಡು ಮಹಾತ್ಮಾಗಾಂಧಿಯವರ ಆದರ್ಶದಲ್ಲಿ ಬೆಳೆಯುವುದಕ್ಕೆ ಪ್ರಯತ್ನ ಮಾಡಿದರು. ಅವರ ವಿಚಾರಗಳು ಏನಿತ್ತು ಅದನ್ನು ಕಾರ್ಯ ರೂಪಕ್ಕೆ ತರುವುದರಲ್ಲಿ ನಮ್ಮ ಪ್ರಾಮಾಣಿಕ ಪ್ರಯತ್ನ ಆದರೆ ಆ ದಿಕ್ಕಿನಲ್ಲಿ ಹೆಜ್ಜೆ ಇಟ್ಟರೆ ಬಹುಶಃ ಇವತ್ತು ಅಂತಹ ಮಹಾನ್ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸುವುದು ಸಾರ್ಥಕ ಆಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ನೂರು ವರ್ಷಗಳಿಗೆ ಕಾಲಿಟ್ಟು ಶತಾಯುಷಿಗಳಾಗಿ, ಈ ದೇಶದ ಒಂದು ಆಗುಹೋಗನ್ನು ನೋಡುವಂಥ ಅವಕಾಶ ಅವರಿಗೆ ಸಿಗಬೇಕಾಗಿತ್ತು ಎಂದು ನಾವಾದರೂ ಆಶಿಸಿದ್ದೆವು. ನೂರು ವರ್ಷಕ್ಕೆ ಕಾಲಿಟ್ಟಂತಹ ಒಂದು ಸಂಭ್ರಮದ ದಿನಗಳನ್ನು ದೇಶದಲ್ಲಿ ಆಚರಿಸುತ್ತಿರುವಂಥ ಕಾಲದಲ್ಲಿ ಇಷ್ಟು ಬೇಗ ಅವರು ಅಗಲಬಹುದು ಎಂದು ನಾವ್ಯಾರು ಭಾವಿಸಿರಲಿಲ್ಲ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಾರತೀಯ ಜನತಾ ಪಾರ್ಟಿಯ ಪರವಾಗಿ ಭಗವಂತನಲ್ಲಿ ಪ್ರಾರ್ಥನೆ ಮಾಡಿ ಅವರು ಹಾಕಿಕೊಟ್ಟಂಥ ಆದರ್ಶದಲ್ಲಿ ನಾವು ನಡೆಯುವಂಥ ಒಂದು ಪ್ರಾಮಾಣಿಕ ಪ್ರಯತ್ನ ಮಾಡೋಣ ಎನ್ನುವ ಮಾತನ್ನು ಹೇಳುತ್ತ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಜೆ.ಹೆಚ್.ಪಟೇಲ್ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿ ಮೊರಾರ್ಜಿಯವರು ಎಂದರೆ ಶಿಸ್ತಿಗೆ ಇನ್ನೊಂದು ಹೆಸರು. ನಾನು ಅವರನ್ನು ಲೋಕಸಭಾ ಸದಸ್ಯನಾದ ದಿನದಿಂದ ಬಹಳ ಹತ್ತಿರದಿಂದ ಕಂಡಿದ್ದೇನೆ. ಅವರಲ್ಲಿ ಅತ್ಯಂತ ಪ್ರಶಂಸನೀಯವಾದ ಕೆಲವು ಗುಣಗಳಿದ್ದವು. ಅವರು ಯಾವುದಾದರೂ ಒಂದು ವಿಷಯಕ್ಕೆ ಹಠ ಹಿಡಿದರೆ, ಅದನ್ನು ಹಾಗೆಯೇ ಮಾಡುತ್ತಿದ್ದರು. ಆ ಕಾರಣದಿಂದ ಕರ್ನಾಟಕ ಮತ್ತು ಮಹರಾಷ್ಟ್ರ ಮಧ್ಯೆ ವಿರಸ ಬಂದಾಗ ಅವರು ನಿಜವಾಗಿಯೂ ರಾಷ್ಟ್ರೀಯವಾದಿಯಾಗಿಯೇ ನಡೆದುಕೊಂಡರೆ ವಿನಃ ಗಾಂಧೀಜಿ ಹುಟ್ಟಿದ ರಾಜ್ಯದಲ್ಲಿ ಹುಟ್ಟಿದರು ಎಂದು ತೋರಿಸಿಕೊಂಡರೇ ವಿನಃ ಪರೋಕಿಯಾಲಿಸಂ ಅಂತರಲ್ಲಾ, ಆ ರೀತಿ ಮಾಡಲಿಲ್ಲ. ಅವರು ಬದುಕಿದ್ದೇ ಹಾಗೆ. ಅವರು ಜೀವನದಲ್ಲಿ ರೂಢಿಸಿಕೊಂಡಿದ್ದು ಶಿಸ್ತು ಅಪಾರವಾದುದು. ಚುನಾವಣಾ ಸಮಯದಲ್ಲಿ ಅವರ ಜೊತೆಗೆ ಎರಡು-ಮೂರು ಸಲ ಓಡಾಡುವಂತಹ ಸಂದರ್ಭ ಬಂದಾಗ ನನಗೆ ಬಹಳ ಕಷ್ಟವಾಗುತ್ತಿತ್ತು. ಅವರು ತಮ್ಮ ಶಿಸ್ತಿನಿಂದಲೇ ತಮ್ಮ ಆರೋಗ್ಯ ಉಳಿಸಿಕೊಂಡಿದ್ದರು. ಶಿಸ್ತೇ ಅವರ ಆರೋಗ್ಯಕ್ಕೆ... ನಿಜವಾದ ಕಾಯಕಲ್ಪ. ಶಿಸ್ತು ಎಲ್ಲಾ ರೀತಿಯಿಂದಲೂ, ಎಲ್ಲಾ ವಲಯಗಳಲ್ಲಿಯೂ ಇವತ್ತು ನಮಗೆ ಬೇಕಾಗಿದೆ. ಇವತ್ತು ದೇಶಕ್ಕೆ ಅಂತಹವರ ನೆನಪಿನ ಅವಶ್ಯಕತೆ ಇದೆ. ಗಾಂಧಿವಾದಿಗಳು ಮತ್ತು ಗಾಂಧಿವಾದ ಕ್ರಮೇಣ ದೇಶದಿಂದ ಕಣ್ಮರೆಯಾಗುತ್ತಿದೆ. ಗಾಂಧಿವಾದವೂ ಕಣ್ಮರೆಯಾಗುತ್ತಿದೆ, ಗಾಂಧಿವಾದಿಗಳೂ ಕಣ್ಮರೆಯಾಗುತ್ತಿದ್ದಾರೆ. ಈ ಸಂದರ್ಭದಲ್ಲಿ ನಾವು ಆದಷ್ಟು ಹುಷಾರಾಗಿರಬೇಕೆಂದು ಹೇಳಿ ಮೊರಾರ್ಜಿಯವರನ್ನು ನೆನಪಿಸಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್ ಕ್ಷೇತ್ರ): ಸನ್ಮಾನ್ಯ ಅಧ್ಯಕ್ಷರೇ, ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ನಮ್ಮ ದೇಶದ ಮಾಜಿ

ಪ್ರಧಾನಿ ಮತ್ತು ಈ ದೇಶಕ್ಕೆ ತನ್ನದೇ ಆದಂತಹ ವಿಶೇಷ ತತ್ವಜ್ಞಾನವನ್ನು ಕೊಟ್ಟಂತಹ ಒಬ್ಬ ಹಿರಿಯ ನಾಯಕನನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ದೇಸಾಯಿ ಎನ್ನತಕ್ಕದ್ದು ಒಂದು ದೊಡ್ಡ ಹೆಸರಾದರೂ ಸಹ ಮೊರಾರ್ಜಿ ರಣಚೋಡ್‌ಜಿ ದೇಸಾಯಿಯವರು ಜನಿಸಿದ್ದು ಒಂದು ಸಾಮಾನ್ಯ ಕುಟುಂಬದಲ್ಲಿ. ಅವರ ತಂದೆಯವರು ಶಿಕ್ಷಕರಾಗಿದ್ದರು. ಆ ಶಿಕ್ಷಕರ ಹೊಟ್ಟೆಯಿಂದ ಹುಟ್ಟಿದಂತಹ ಈ ಮಹಾಪುರುಷ ತನ್ನ ಜೀವನದಲ್ಲಿ ಅನೇಕ ನೋವುಗಳನ್ನು ಕಂಡರು. ಚಿಕ್ಕಂದಿನಲ್ಲೇ ತಮ್ಮ ತಂದೆಯನ್ನು ಕಳೆದುಕೊಂಡರು. ಮೊರಾರ್ಜಿಯವರಿಗೆ ಸುಮಾರು 7-8 ವರ್ಷ ವಯಸಾಗಿದ್ದಾಗಲೇ ಅವರ ತಂದೆ ಅವರನ್ನು ಅಗಲಿದರು. 15 ವರ್ಷಕ್ಕೆ ಅವರ ಲಗ್ನ ಆಗಿತ್ತು. ಇಂತಹ ಒಂದು ಪರಿಸ್ಥಿತಿಯಲ್ಲಿ ಅವರು ವಿದ್ಯಾಭ್ಯಾಸ ಮಾಡಿದರು. ಪ್ರಾವಿನ್‌ಷಿಯಲ್ ಸ್ಟೇಟ್ ಎಗ್ಸಾಮಿನೇಷನ್ ಪಾಸಾಗಿ ಅವರು ಡೆಪ್ಯುಟಿ ಕಲೆಕ್ಟರ್ ಆಗಿ ಅಹಮದಾಬಾದ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅಂತಹ ಕಾಲದಲ್ಲಿ ದಿವಂದತ ಮೊರಾರ್ಜಿಯವರು ಗಾಂಧೀಜಿಯವರ ತತ್ವಕ್ಕೆ, ಅವರ ಪ್ರಭಾವಕ್ಕೆ ಮಾರು ಹೋಗಿ ಕಾಂಗ್ರೇಸ್ ಪಕ್ಷವನ್ನು ಸೇರಿ, ಚಳುವಳಿ ಪ್ರಾರಂಭ ಮಾಡಿ ಸುಮಾರು 1930-31ರಲ್ಲಿ ಮೂರು ವರ್ಷಗಳ ಕಾಲ ಜೈಲಿನಲ್ಲಿದ್ದರು. 1942ರಲ್ಲೂ ಕೂಡ ಅವರು ಸುಮಾರು ಮೂರು ವರ್ಷ ಕಾಲ ಜೈಲಿನಲಿದ್ದರು. ದೇಶಕ್ಕಾಗಿ ಸಾಕಷ್ಟು ತ್ಯಾಗ ಮಾಡಿದಂತಹ ಒಬ್ಬ ಧೀಮಂತ ವ್ಯಕ್ತಿಯಾಗಿದ್ದಾರೆ. ಈಗಾಗಲೇ ಸದನದಲ್ಲಿ ಮಂಡಿಸಿರುವ ಸಂತಾಪ ಸೂಚಕ ನಿರ್ಣಯದಲ್ಲಿ ತಿಳಿಸಿದಂತೆ ದಿವಂಗತ ಮೊರಾರ್ಜಿಯವರು ಮಾನ್ಯ ಬಿ.ಜಿ.ಖೇರ್ ಅವರ ಸಚಿವ ಸಂಪುಟದಲ್ಲಿ ರೆವಿನ್ಯೂ ಮಂತ್ರಿಗಳಾಗಿ ಹಾಗೂ ಅರಣ್ಯ ಮಂತ್ರಿಗಳಾಗಿಯೂ ಸಾಕಷ್ಟು ಕೆಲಸವನ್ನು ಮಾಡಿದ್ದಾರೆ. ಅವರು ರೆವಿನ್ಯೂ ಮಂತ್ರಿಯಾಗಿದ್ದ ಕಾಲದಲ್ಲಿ ಭೂ ಸುಧಾರಣಾ ಕಾನೂನನ್ನು ತಂದು ಬಾಂಬೆ ಪ್ರಾವಿನ್ಸ್‌ನಲ್ಲಿ ಒಂದು ದೊಡ್ಡ ಸುಧಾರಣೆಯನ್ನೇ ಅವರು ಮಾಡಿದರು. ಅದೇ ರೀತಿಯಲ್ಲಿ 1962ರಲ್ಲಿ ಕೇಂದ್ರ ಅರ್ಥ ಸಚಿವರಾಗಿದ್ದಾಗ ಅನೇಕರ ವಿರೋಧಗಳನ್ನು ಲೆಕ್ಕಿಸದೇ ಗೋಲ್ಡ್ ಕಂಟ್ರೋಲ್ ಆರ್ಡರ್ ಜಾರಿಗೆ ತಂದರು. ಅವರು ತುಂಬಾ ಹಠವಾದಿಗಳು. ಯಾವುದು ಅವರಿಗೆ ಒಳ್ಳೆಯದು ಎನಿಸುತ್ತಿತ್ತು ಅಥವಾ ಇದು ಸರಿ ಎಂದು ಅನ್ನಿಸಿದ್ದನ್ನು ಅವರು ಜಾರಿಗೆ ತರದೇ ಇರುತ್ತಿರಲಿಲ್ಲ. ಅಂತಹ ಒಬ್ಬ ದಿಟ್ಟ ವ್ಯಕ್ತಿ ಈ ದೇಶದ ಪ್ರಧಾನ ಮಂತ್ರಿಗಳಾಗಿಯೂ ಕೆಲಸ ಮಾಡಿ ತನ್ನದೇ ಆದಂತಹ ವಿಶಿಷ್ಟವಾದಂತಹ ತತ್ವಜ್ಞಾನವನ್ನು ಮತ್ತು ಮಾರ್ಗದರ್ಶನವನ್ನು ನಮ್ಮೆಲ್ಲರಿಗೂ ತೋರಿಸಿ ಹೋಗಿದ್ದಾರೆ. ನಮ್ಮನ್ನು ಅವರು ಅಗಲಿರುವ ಈ ಸಂದರ್ಭದಲ್ಲಿ ನಾವುಗಳಿಲ್ಲರೂ ಕೂಡ ಅವರ ತತ್ವ ಆದರ್ಶಪ್ರಾಯಗಳನ್ನು ಪಾಲಿಸೋಣ. ಅವರ ನಿಧನದಿಂದಾಗಿ ಅವರ ಕುಟುಂಬಕ್ಕೆ ತುಂಬಲಾಗದ ನಷ್ಟವುಂಟಾಗಿದ್ದು ಅದರಲ್ಲಿ ನಾವೆಲ್ಲರೂ ಪಾಲ್ಗೊಳ್ಳೋಣ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಎಸ್.ಬಂಗಾರಪ್ಪ (ಸೊರಬ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರು ಈ ಸದನದಲ್ಲಿ ಮಂಡಿಸಿರತಕ್ಕ ಸಂತಾಪ ಸೂಚಕ ನಿರ್ಣಯವನ್ನು ನಾನು ಮತ್ತು ನಮ್ಮ ಪಕ್ಷ ಬೆಂಬಲಿಸುತ್ತಾ ಮಾತುಗಳನ್ನು ಹೇಳಲಿಚ್ಚಿಸುತ್ತೇನೆ.

ಯಾವುದೇ ವ್ಯಕ್ತಿ ತನ್ನ ಹುಟ್ಟಿನಿಂದಲೇ ಒಮ್ಮೆಲೆ ತನ್ನ ಬೆಳವಣಿಗೆಯನ್ನು ಕಾಣಲಿಕ್ಕಾಗುವುದಿಲ್ಲ. ಯಾವುದೇ ಸಮಾಜ ಕೂಡ ತತ್‌ಕ್ಷಣ ಬೆಳವಣಿಗೆ ಕಾಣಲಿಕ್ಕಾಗುವುದಿಲ್ಲ. ತಮಗೆ ಉತ್ತಮವಾದ ಹಿನ್ನೆಲೆಯಿದ್ದಾಗ, ಒಳ್ಳೆಯ ಭವಿಷ್ಯವನ್ನು ರೂಪಿಸಿಕೊಳ್ಳತಕ್ಕ ಜನರನ್ನು ನಾವು ಕಾಣುತ್ತೇವೆ. ಅದರೆ ಅತಿ ಸಾಧಾರಣವಾದಂತಹ ಹಿನ್ನೆಲೆಯಿಂದ ಬಂದಂತಹ ಒಬ್ಬ ವ್ಯಕ್ತಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅಂದಿನ ಕಾಲ ಸಮಾಜ ಮತ್ತು ವಾತಾವರಣ ಸಹಾಯಕವಾಗುತ್ತದೆ. ದಿವಂಗತ ಮೊರಾರ್ಜಿಯವರ ಹುಟ್ಟು ಮತ್ತು ಬೆಳವಣಿಗೆ ಇದಕ್ಕೊಂದು ನಿದರ್ಶನ. ಕಾಲವೇ ಅವರ ವ್ಯಕ್ತಿತ್ವವನ್ನು ರೂಪಿಸುತ್ತಾ ಹೋಯಿತು ಎನ್ನತಕ್ಕದ್ದು ನಮಗೆ ಇದರಿಂದ ಸ್ಪಷ್ಟವಾಗಿ ವೇದ್ಯವಾಗುತ್ತದೆ. ಮೊರಾರ್ಜಿಯವರು ಹುಟ್ಟಿನಲ್ಲಿ ಒಬ್ಬ ಶಿಕ್ಷಕರ ಮಗನಾಗಿದ್ದರು ಎಂಬ ಮಾತನ್ನು ಮಾನ್ಯ ಖಿರ್ಗೆಯವರು ಹೇಳಿದ್ದಾರೆ. ಸಾಧಾರಣ ಬೆಳವಣಿಗೆಯಿಂದ ಉನ್ನತ ಮಟ್ಟಕ್ಕೆ ಏರಿದರು. ಬಾಂಬೆ ಟೆನೆನ್ಸಿ ಕಾಯ್ದೆಯನ್ನು ಅವರು ಜಾರಿಗೆ ತಂದರು. ಆ ಕಾಯ್ದೆಯ ಫಲವನ್ನು ಇವತ್ತು ನಾವು ಕರ್ನಾಟಕದಲ್ಲಿ ಅನುಭವಿಸುತ್ತಿದ್ದೇವೆ. ಇದು ಬಹಳಷ್ಟು ಜನರಿಗೆ ಗೊತ್ತಿರಲಾರದು. ದಿವಂಗತ ದೇವರಾಜ್ ಅರಸ್‌ರವರು ದಿನಾಂಕ 1.3.74ರಲ್ಲಿ ತಂದಂತಹ ಒಂದು ತಿದ್ದುಪಡಿಯಿಂದ 7ನೇ ನವೆಂಬರ್ ಅರ್ಜಿ ಹಾಕತಕ್ಕ ಒಬ್ಬ ಗೇಣಿದಾರ ಪಹಣಿ ನಕಲು ಆಧಾರದ ಮೇಲೆ ತನ್ನ ಹಿಡುವಳಿ ಹಕ್ಕನ್ನು ಕೇಳತಕ್ಕ ಒಂದು ಕಾನೂನನ್ನು ನಾವು ಮಾಡಿದೆವು. ಆ ದಿವಂಗತರಿಗೆ ನಾವು ಹೆಚ್ಚಿನ ಗೌರವವನ್ನು ಕೊಡುತ್ತೇವೆ. ಆದರೆ ಅದರ ಫಲ ಪಡೆಯಬೇಕೆಂದು ಆಸಕ್ತಿಯುಳ್ಳವರು ಸುಮಾರು 7-8 ಲಕ್ಷ ಜನ ಅರ್ಜಿ ಹಾಕಿದರೆ ಭೂಮಿ ಅವರ ಸ್ವಾಧೀನದಲ್ಲಿದ್ದರೂ ನಿಮಗೆ ಪಾಹಣಿ ಇಲ್ಲ ಎಂದು ಹೇಳಿ ಅವರ ಹಕ್ಕನ್ನು ಕಳೆದುಕೊಳ್ಳತಕ್ಕಂಥ ಹಲವಾರು ಎಡರು ತೊಡರುಗಳನ್ನು ನಮ್ಮ ಕಾಯ್ದೆಯಲ್ಲಿ ನಾವು ಕಂಡಿದ್ದೇವೆ. ಆದರೆ ಆಗಿದ್ದಂತಹ ಆ ಕಾಯ್ದೆಯಿಂದಾಗಿ ಬೊಂಬಾಯಿ ಕರ್ನಾಟಕದಲ್ಲಿದ್ದ ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಕಾರವಾರ ಈ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಈ ತೊಂದರೆ ಅಷ್ಟೊಂದು ಕಂಡುಬರಲಿಲ್ಲ. ಅಂತಹ ಒಂದು ಕಾನೂನನ್ನು ಮೊರಾರ್ಜಿಯವರು ಕಂದಾಯ ಮಂತ್ರಿಗಳಾಗಿದ್ದಾಗ ತಂದಿದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಬೊಂಬಾಯಿ ಟೆನನೆನ್ಸಿ ಆ್ಯಕ್ಟ್ ಪ್ರಕಾರ ಒಂದು ಕಾಯಿದೆಯನ್ನು ಮಾಡಿದರು. ಒಬ್ಬ ಗೇಣಿದಾರ ಭೂಮಿಯನ್ನು ಹೊಂದಿದ್ದರೆ ಅವರ ಹೆಸರನ್ನು ಪಾಹಣಿಯಲ್ಲಿ ಬರೆಯಲೇ ಬೇಕು ಎನ್ನತಕ್ಕಂಥ ಕಡ್ಡಾಯವಾದ ಕಾಯ್ದಿಯನ್ನು ತಂದರು. ಅವರು ಇಡೀ ದೇಶದಲ್ಲೇ ಪ್ರಪ್ರಥಮವಾಗಿ ಈ ಕಾಯಿದೆಯನ್ನು ತಂದರು. ಅದು ಏನು ತೋರಿಸುತ್ತದೆ ಎಂದರೆ ಸಮಾಜದಲ್ಲಿಯ ಒಬ್ಬ ಜನಸಾಘಾನ್ಯರ ಬಗ್ಗೆಯೂ ಬಹಳ ಕಾಳಜಿ ಇತ್ತು ಎಂದು. ಅದಕ್ಕಾಗಿ ಈ ಬಾಂಬೆ ಕರ್ನಾಟಕ ಈ ನಾಲ್ಕು ಜಿಲ್ಲೆಗಳಲ್ಲಿ ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಕಾರಷ್ಠಾರ ಅ ಜಿಲ್ಲೆಗಳಲ್ಲಿ ನಾವು ಕರ್ನಾಟಕ ಭೂ ಸುಧಾರಣಾ ಕಾಯಿದೆಯನ್ನು ಜಾರಿಗೆ ತರಕ್ಕಂಥಹ ಕಾಲದಲ್ಲಿ ಯಾವುದೇ ಎಡರು ತೊಡರುಗಳು ಬರಲಿಲ್ಲ. ಎಲ್ಲಿಯಾದರು ಬಂದರೆ ಶೇಕಡ ಒಂದರಷ್ಟು ಅಥವಾ ಎರಡರಷ್ಟು ಬಂದಿರಬಹುದು. ಆದರೆ ಹಳೆಯ

ಮೈಸೂರು ರಾಜ್ಯದಲ್ಲಿ ಸಾಕಷ್ಟು ಪ್ರತಿರೋಧವನ್ನು ನಾವು ಜಮೀನ್ದಾರರ ಪರವಾಗಿ ಗೇಣಿದಾರರು ಕಂಡರು. ಎನ್ನತಕ್ಕಂಥದ್ದನ್ನು ನಾವೆಲ್ಲರು ಅನುಭವಿಸಿರತ್ಕಂಥ ವಿಚಾರಧಾರೆಗಳು. ಅದಕ್ಕಾಗಿ ನಾವು ಮೊರಾರ್ಜಿದೇಸಾಯಿಯವರನ್ನು ಬಡವರ ಪರವಾಗಿ ಕೂಡ ಅಭಿನಂದಿಸುತ್ತೇವೆ. ಇದು ಒಂದು ವಿಚಾರವಾದರೆ ಇಡೀ ರಾಷ್ಟ್ರದಲ್ಲಿ ರಾಷ್ಟ್ರೀಯ ರಾಜಕೀಯದಲ್ಲಿ ಬಹಳ ರಂಗೇರಿದ ವಾತಾವರಣವನ್ನು ನಾವು ಕಂಡೆವು. 1977 ರಲ್ಲಿ ಕಾಂಗ್ರೆಸ್ ಸೋತು ಆಗಿನ ಜನತಾ ಪಕ್ಷ ಅಧಿಕಾರಕ್ಕೆ ರಾಷ್ಟ್ರಮಟ್ಟದಲ್ಲಿ ಬಂದಂಥ ಕಾಲ, ಆ ಕಾಲದಲ್ಲಿ ನಾಯಕತತ್ವವನ್ನು ವಹಿಸತಕ್ಕಂಥ ಒಂದು ಸಂದರ್ಭ, ಪ್ರಧಾನಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿದ ಮೇಲೆ ತನ್ನದೇ ಆಗಿರತಕ್ಕಂಥ ತತ್ವ, ನಿಷ್ಠೆ, ಛಲ ಎಡಬಿಡದೇ ಇರತಕ್ಕಂಥ ಹೋರಾಟದ ಹಿನ್ನಲೆಯಲ್ಲಿ ಬಂದಂಥ ಮೊರಾರ್ಜಿದೇಸಾಯಿಯವರಿಗೆ ಆ ಅಧಿಕಾರ ಕೊಟ್ಟ ಮೇಲೆ ರಾಷ್ಟ್ರದ ಒಳತನ್ನೇ ಅದನ್ನು ಯಾವಾಗಲೂ ಕೂಡ ಬಯಸಿ ಅದನ್ನೇ ಗುರಿಯಾಗಿಟ್ಟುಕೊಂಡು ಹೋಗಿರತಕ್ಕಂಥ ಒಂದು ಛಲ. ಒಬ್ಬ ವ್ಯಕ್ತಿಗೆ ಆ ಛಲ ಒಳ್ಳೆಯ ದಾರಿಯಲ್ಲಿ ಇರಬೇಕು. ಹೊಗಿದ್ದಾಗ ಮಾತ್ರ ಸಾಧನೆ ಸ್ಪಷ್ಟತೆಯನ್ನು ಕಂಡುಕೊಂಡು ಮುಂದಕ್ಕೆ ತನ್ನ ಅಡಿಯನ್ನು ಇಟ್ಟು ಮುಂದಕ್ಕೆ ಹೋಗುತ್ತಿರುತ್ತದೆ. ಅಂತಹ ಒಂದು ಸಂದರ್ಭದಲ್ಲಿ ಮೊರಾರ್ಜಿಭಾಯಿಯವರ ಸಾಧನೆಯನ್ನು ನಾವು ಸ್ಪಷ್ಟವಾಗಿ ಯಾವಾಗಲು ಗುರುತಿಸುತ್ತೇವೆ, ಅರ್ಥ ಪೂರ್ಣವಾಗಿ ನಾವು ಅದನ್ನು ಕಂಡುಕೊಳ್ಳುತ್ತೇವೆ. ಅದಕ್ಕಾಗಿ ಅವರ ಜೀವನ ಸಾರ್ಥಕವಾಗಿದೆ ಎನ್ನುವುದನ್ನು ನಾವು ಇಲ್ಲಿ ಕಾಣುತ್ತೇವೆ. ಕೊನೆಯವರೆಗೂ ಕೂಡ ಚರಕವನ್ನು ತಿರುಗಿಸಿ ತಿರುಗಿಸಿ ನೂಲನ್ನು ತೆಗೆಯುತಕ್ಕಂಥ ಒಂದು ವಿಚಾರ ಧಾರೆ, ಗಾಂಧೀಜಿಯವರ ತತ್ವ ನಿಷ್ಠೆಯಲ್ಲಿ ಅನುಷ್ಠಾನದಲ್ಲಿ ಕಂಡುಕೊಂಡಿರತಕ್ಕಂಥವರು ಸ್ಪಷ್ಟತೆಯಿಂದ ಅದನ್ನು ನೋಡಿರತಕ್ಕಂಥವರು. ಅದಕ್ಕಾಗಿ ನಾವು ತತ್ವ ನಿಷ್ಠಾ ಅಪ್ಪಟವಾಗಿ ಗಾಂಧಿವಾದಿ, ಅಚಲವಾದ ನಂಬಿಕೆಯನ್ನು ಅವರು ಇಟ್ಟುಕೊಂಡು ಹೋದರು ಎಂದು ನಾವು ಯಾವಾಗಲು ಕಾಣುತ್ತೇವೆ. ಅದಕ್ಕಾಗಿ ನಾವು ಪೂಜ್ಯ ಮಹಾತ್ಮಾ ಗಾಂಧೀಜಿಯವರ ಶಿಷ್ಯ ವರ್ಗಗಳಲ್ಲಿ ಅವರೂ ಕೂಡ ಒಬ್ಬರಾಗಿದ್ದರು ಎನ್ನತಕ್ಕಂಥ ದೃಷ್ಟಿಯಿಂದಲ್ಲೂ ಕೂಡ ಅವರಿಗೆ ಅಪಾರವಾದಂಥ ಗೌರವವನ್ನು ಈ ರಾಷ್ಟ್ರ ಕೊಡುತ್ತದೆ ನಿಜ. ಶತಮಾನ ತುಂಬತಕ್ಕಂಥ ಒಂದು ವರ್ಷದಲ್ಲಿ ಮೊನ್ನೆ ಮೊನ್ನೆ ಕಾಲಿಟ್ಟಿದ್ದರು. ತುಂಬಲಿಲ್ಲ ಎನ್ನತಕ್ಕಂಥದ್ದು ನಮ್ಮ ವ್ಯಥೆ. ಆದರೆ ಸಾರ್ಥಕ ಜೀವನದ ಹಿನ್ನೆಲೆ, ಹೋರಾಟದ ಹಿನ್ನಲೆ ಅರ್ಥಪೂರ್ಣವಾಗಿ ಅಲ್ಲಿರತಕ್ಕಂಥದ್ದು ನೋಡಿದರೆ ನೂರು ವರ್ಷಗಳು ತುಂಬದಿದ್ದರೂ ಕೂಡ ಅವರು ನೂರು ವರ್ಷಕ್ಕೆ ಮಿಕ್ಕಿತಕ್ಕಂಥ ಒಂದು ವಿಚಾರಧಾರೆ ಒಂದು ದೊಡ್ಡ ಮಹಾನ್ ಕೊಡುಗೆಯಾಗಿ ಈ ರಾಷ್ಟ್ರಕ್ಕೆ ಕೊಟ್ಟು ಹೋಗಿದ್ದಾರೆ ಎನ್ನತಕ್ಕಂಥ ಮಾತು ಸರ್ವ ವಿಧಿತ. ಅದಕ್ಕಾಗಿ ಮುರಾರ್ಜಿಯವರಿಗೆ ಅಪಾರವಾದ ಗೌರವವನ್ನು ಇಡೀ ರಾಷ್ಟ್ರವೇ ಕೊಡುತ್ತಿದೆ. ಈ ನೋವು ಅವರ ಕುಟುಂಬ ವರ್ಗದವರಿಗಷ್ಟೇ ಅಲ್ಲ, ಈ ನೋವು ಇಡೀ ರಾಷ್ಟ್ರದ ನೋವು. ನಷ್ಟ ಕುಟುಂಬಕ್ಕಷ್ಟೇ ಅಲ್ಲ ಈ ನಷ್ಟ ಇಡೀ ರಾಷ್ಟ್ರದ ನಷ್ಟ. ಇದೊಂದು ರಾಷ್ಟ್ರೀಯ ನಷ್ಟ. ಇದು ತುಂಬಲಾರದ ನಷ್ಟ. ಆದ್ದರಿಂದ ಈ ಒಂದು ದುಃಖ ಸನ್ನಿವೇಶದಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಅವರಿಗೆ ಗೌರವವನ್ನು

ಕೊಡುತ್ತಿದ್ದೇವೆ. ಆ ನಷ್ಟವನ್ನು ತುಂಬಿಕೊಡಲಿ ಎನ್ನತಕ್ಕಂಥ ಒಂದು ಅನನ್ಯವಾದ ಪ್ರಾರ್ಥನೆಯನ್ನು ದೇವರಲ್ಲಿ ಮಾಡುತ್ತೇವೆ, ಎನ್ನತಕ್ಕಂಥ ಮಾತನ್ನಾಡಿ, ಧ್ವನಿಗೂಡಿಸಿ ಈ ಒಂದು ಸಂತಾಪ ನಿರ್ಣಯಕ್ಕೆ ಸಂಪೂರ್ಣವಾಗಿ ನಾವು ಒಕ್ಕೊರಲಿನಿಂದ ಬೆಂಬಲವನ್ನು ಈ ಸಂದರ್ಭದಲ್ಲಿ ನಾವು ಕೊಡುತ್ತಿದ್ದೇವೆ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮೊರಾರ್ಜಿ ದೇಸಾಯಿಯವರ ನಿಧನದಿಂದ ಗಾಂಧೀ ಯುಗದ ಒಂದು ಶ್ರೇಷ್ಠ ಪರಂಪರೆಯ ಕೊಂಡಿ ಕಳಚಿ ಹೋಗಿದೆ. ಅತ್ಯಂತ ನಿಷ್ಠೂರವಾದಿ, ಛಲವಾದಿ ಚುತ್ತು ಆಡಳಿತ ದಕ್ಷತೆಯಲ್ಲಿ ತನ್ನದೇ ಆದಂಥ ಒಂದು ಸ್ವಂತಿಕೆಯಲ್ಲಿ ವಿಜೃಂಭಿನಿಸಿದಂತಹ ಮೊರಾರ್ಜಿ ದೇಸಾಯಿಯವರು ಅತ್ಯಂತ ಅಪರೂಪದ ವ್ಯಕ್ತಿ. ಅವರು ಬೊಂಬಾಯಿಯ ಮುಖ್ಯ ಮಂತ್ರಿಯಾಗಿ, ಅವರು ನಡೆಸಿದಂತಹ ದಕ್ಷತೆಯ ಪ್ರಾಮಾಣಿಕತೆಯ ಆಡಳಿತ ಇಂದಿಗೂ ಕೂಡ ಈ ರಾಷ್ಟ್ರದ ಆಡಳಿತದ ನಕಾಶೆಯಲ್ಲಿ ಅವರಿಗೆ ಒಂದು ಶ್ರೇಷ್ಠ ಸ್ಥಾನವನ್ನು ತಂದು ಕೊಟ್ಟಿದೆ. ಮುಖ್ಯಮಂತ್ರಿಗಳ ಒಂದು ಆಡಳಿತ ಒಂದು ನಿಷ್ಠುರತೆ ಯಾವುದೇ ಸಂದರ್ಭದಲ್ಲಿ ಬಂದಂಥ ಒತ್ತಡದ ವಿರುದ್ಧ ಕೂಡ ಈಜಾಡತಕ್ಕ ಒಬ್ಬ ಸ್ಥೈರ್ಯವಂತ ಒಬ್ಬ ಮುಖ್ಯಮಂತ್ರಿ ಈ ರಾಷ್ಟ್ರದಲ್ಲಿ ಆಗಿ ಹೋಗಿದ್ದರೆ ಅವರಿಗೆ ಖಂಡಿತವಾಗಿ ಕೂಡ ಅಗ್ರಸ್ಥಾನ ಇವೊತ್ತಿಗೂ ಕೂಡ ಸಲ್ಲತಕ್ಕದ್ದು ಎಂದು ನಾನು ಅಪೇಕ್ಷೆ ಪಡುತ್ತೇನೆ. ಅವರೂ ಸಾಮಾನ್ಯವಾಗಿ ಕಾಲದ ಜೊತೆಯಲ್ಲಿ ಈಜಾಡಿಕೊಂಡು ಹೋದವರಲ್ಲ. ಅನೇಕ ಸಂದರ್ಭದಲ್ಲಿ ಅದಕ್ಕೆ ವಿರುದ್ಧವಾದರೂ ಕೂಡ ತನ್ನ ಅಧಿಕಾರಕ್ಕೆ ಅಥವಾ ತನ್ನ ಸ್ಥಾನಕ್ಕೆ ಕುತ್ತು ಬರತಕ್ಕ ಅಪಾಯದ ಗಂಟೆ ಬಾರಿಸಿದರೂ ಕೂಡ ಅದನ್ನು ಲೆಕ್ಕಿಸದೇ ಹೋರಾಟ ಮಾಡಿದಂಥ ಒಬ್ಬ ಅಪ್ರತಿಮ ಹೋರಾಟಗಾರ ಸನ್ಮಾನ್ಯ ಶ್ರೀ ಮೊರಾರ್ಜಿ ದೇಸಾಯಿಯವರು. ಅವರು ಕೇಂದ್ರಕ್ಕೆ ಹೋದಾಗ ಕೂಡ ಅವರು ಹಾಕಿಕೊಂಡಂಥ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಅವರು ಹಾಕಿಕೊಟ್ಟಂಥ ಶ್ರೇಷ್ಠ ಆಡಳಿತ ಪಂಕ್ತಿಗಳು, ಆ ಪರಂಪರೆ. ಅದು ಎಲ್ಲಾ ಕಾಲಕ್ಕೂ ಕೂಡ ನಮಗೆ ಮಾರ್ಗದರ್ಶನವನ್ನು ನೀಡತಕ್ಕಂಥ ವಿಚಾರದಲ್ಲಿ ಇಂದೂ ಕೂಡ ಅಚ್ಚಳಿಯದೇ ನಮ್ಮ ಆಡಳಿತದ ವಿದ್ಯುತ್‌ಪೂರ್ಣ ಮತ್ತು ಶ್ರೇಷ್ಠ ಒಂದು ಪ್ರತಿಭೆಯಿಂದ ಈ ರಾಷ್ಟ್ರದ ಒಂದು ಆರ್ಥಿಕ ವ್ಯವಸ್ಥೆಯನ್ನು ಶಿಸ್ತು ಸಂಯಮಕ್ಕೆ ಒಳಗೊಂಡು, ರಾಷ್ಟ್ರದ ಪ್ರಗತಿಗೆ ಹೆಚ್ಚು ಪೂರಕವಾಗಿ ಕೆಲಸಮಾಡಿದಂಥ ಒಂದು ಸಿದ್ಧಾಂತವನ್ನು ಅವರು ನಮಗೆ ಹಾಕಿಕೊಟ್ಟಿದ್ದಾರೆ. ತನ್ನ ಕೊನೆ ಉಸಿರು ಎಳೆಯುವವರೆಗೂ ಕೂಡ ಅವರು ಗುಜರಾತಿನ ವಿದ್ಯಾಪೀಠದ ಕುಲಾಧಿಪತಿಗಳಾಗಿ ಮಹಾತ್ಮಾ ಗಾಂಧೀಜಿಯವರ ಶ್ರೇಷ್ಠವಾದ ಧ್ಯೇಯ, ಪರಂಪರೆ ಸಿದ್ಧಾಂತಗಳನ್ನು ರಾಷ್ಟ್ರಮಟ್ಟದಲ್ಲಿ ಅಷ್ಟೇ ಅಲ್ಲ, ಇಡೀ ವಿಶ್ವ ಮಟ್ಟದಲ್ಲಿ ಕೂಡ ಜ್ವಲಂತವಾಗಿ ಉಳಿಯುವ ರೀತಿಯಲ್ಲಿ ಅವರು ಆ ಸಂಸ್ಥೆಯ ಪರಂಪರೆಯನ್ನು ಉಳಿಸಿದ್ದಾರೆ. ಅನೇಕ ಇತ್ತೀಚಿನ ಒಂದು ಆಧುನಿಕ ಜಾಡಿನಲ್ಲಿ ಇವೊತ್ತು ಶಿಕ್ಷಣ ವ್ಯವಸ್ಥೆ ತೇಲಿ ಹೋಗತಕ್ಕಂಥ ಸಂದರ್ಭದಲ್ಲಿ ಕೂಡ ಮಹಾತ್ಮಾ ಗಾಂಧಿಜಿಯವರ ಸಿದ್ಧಾಂತವನ್ನು ಸ್ಥಿರವಾಗಿ ಪಾಲಿಸಿಕೊಂಡು

ಹೋಗತಕ್ಕಂಥ ಒಂದು ಕೆಲಸವನ್ನು ಇವೊತ್ತಿಗೂ ಕೂಡ ಗುಜರಾತಿನ ವಿದ್ಯಾಪೀಠ ನಡೆಸಿಕೊಂಡು, ಗ್ರಾಮಾಂತರ ಜೀವನ ಯಾವ ಸ್ವರೂಪದಲ್ಲಿ ಬೆಳೆಯಬೇಕೆಂದು ಒಂದು ಸೈದ್ಧಾಂತಿಕವಾಗಿ ಮೇಲ್ಪಂಕ್ತಿಯನ್ನು ಹಾಕತಕ್ಕಂಥ ಒಂದು ಶಿಕ್ಷಣವನ್ನು ಪಡೆಯತಕ್ಕಂಥ ಸಂಸ್ಥೆಯನ್ನು ಅವರು ಯಾವಾಗಲೂ ಕೂಡ ಉಳಿಸಿಕೊಂಡು ಹೋಗಿದ್ದಾರೆ. ಅಂತಹ ಒಬ್ಬ ಶ್ರೇಷ್ಠ ರಾಷ್ಟ್ರೀಯವಾದಿ ಒಬ್ಬ ನಿಷ್ಠೂರವಾದಿ ಮತ್ತು ತಾನು ನಂಬಿದಂಥ ಸಿದ್ಧಾಂತಕ್ಕಾಗಿ ಅಪ್ರತಿಮ ತ್ಯಾಗವನ್ನು ಮಾಡತಕ್ಕಂಥ ಒಬ್ಬ ಮೇಲ್ಮಟ್ಟದ ಔನ್ನತ್ಯದ ವ್ಯಕ್ತಿಯನ್ನು ಇವೊತ್ತು ನಾವು ಕಳೆದುಕೊಂಡಿದ್ದೆವೆ. ಅವರ ಆದರ್ಶ ನಮ್ಮ ರಾಷ್ಟ್ರವನ್ನು ನಮ್ಮನ್ನು ಮುಂದುವರೆಕೊಂಡು ಹೋಗಲಿ ಎಂದು ಈ ಸಂದರ್ಭದಲ್ಲಿ ಹಾರೈಸಿ ಮಾನ್ಯ ಸಭಾನಾಯಕರು ತಂದಂಥಹ ಈ ಒಂದು ನಿರ್ಣಯಕ್ಕೆ ನಮ್ಮೆಲ್ಲರ ಸಂಪೂರ್ಣವಾದಂಥಹ ಒಂದು ಬೆಂಬಲವನ್ನು ಕೊಟ್ಟು ನನಗೆ ಕೊಟ್ಟಂಥ ಅವಕಾಶಕ್ಕಾಗಿ ಅಧ್ಯಕ್ಷರಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ತಂದಂಥಹ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣವಾದಂಥ ಬೆಂಬಲನ್ನು ನೀಡುತ್ತೇನೆ. ಭಾರತದ ಅದ್ವಿತೀಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾದಂಥ ಮೊರಾರ್ಜಿದೇಸಾಯಿಯವರ ನಿಧನದಿಂದ ಅತ್ಯಂತ ತುಂಬಲಾರದ ನಷ್ಟವುಂಟಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ರೀತಿ ಶಿಸ್ತಿಗೆ ಮತ್ತೊಂದು ಹೆಸರು ಮೊರಾರ್ಜಿದೇಸಾಯಿಯವರು. ಒಂದೆರಡು ಮೂರು ಸಂದರ್ಭಗಳಲ್ಲಿ ನಾನು ಅವರನ್ನು ಗಮನಿಸಿದ್ದೇನೆ. ಕರ್ನಾಟಕಕ್ಕೆ ಚುನಾವಣಾ ಪ್ರಚಾರಕ್ಕೆ ಅವರು ಬಂದಾಗ, ನೂತನೂರು ಹತ್ತಿರ ಇನ್ನೂ ಎರಡು ಸಭೆಗಳಿಗೆ ಹೋಗಬೇಕೆಂದು ಅವರು ಹೇಳಿದರು. ಇಂಥಿಂಥ ಸಭೆ ಇಷ್ಟು ಹೊತ್ತಿಗೆ ಇದೆ ಎಂದು ನಾವು ಹೇಳಿದ್ದೆವು. ಆ ಸಭೆ ಬಿಟ್ಟು ಅವರು ಬೇರೆ ಸಭೆಗೆ ಹೋಗುವುದಕ್ಕೆ ತಯಾರಾಗಿರಲಿಲ್ಲ. ಅವರು ಮರದ ಕೆಳಗೆ ಕುಳಿತು ಬಿಟ್ಟರು. ನಮ್ಮ ರಾಜ್ಯದ ಎಲ್ಲಾ ಮುಖಂಡರೂ ಅವರ ಕಾಲಿಗೆ ಬಿದ್ದರೂ ಅವರು ಮಾತ್ರ ಅತ್ತ ಇತ್ತ ಅಲ್ಲಾಡಲಿಲ್ಲ. ಇದು ಒಂದಾದರೆ, ಮತ್ತೊಂದು ಜ್ಞಾಪಕ ಗಡಿಸಮಸ್ಯೆ ಬಂದಾಗ ಎಷ್ಟೇ ಒತ್ತಡ ಬಂದಾಗ ಯಾರು ಏನೇ ಹೇಳಲಿ ಬಾಂಬೆಯಲ್ಲಿ ಕುಳಿತುಕೊಂಡು ಬೆಳಗಾವಿ ಕರ್ನಾಟಕದ ಪ್ರದೇಶ ಎಂದು ಹೇಳಿದಂಥ ದಿಟ್ಟ ನಿಲುವಿನ ವ್ಯಕ್ತಿ. ಅವರ ನಿಲುವಿನಲ್ಲಿ ಎಷ್ಟು ಪ್ರಾಮಾಣಿಕತೆ ದಿಟ್ಟ ನಿಲುವು ಇಗಿತ್ತು ಎನ್ನತಕ್ಕಾಂಥದ್ದು ಮುಖ್ಯವಾದುದು. ಅವರು ಪ್ರಧಾನ ಮಂತ್ರಿಗಳಾಗಿ ಪ್ರಮಾಣ ವಚನ ಮಾಡತಕ್ಕಾಂಥ ಸಂದರ್ಭದಲ್ಲಿ ಆ ಒಂದು ಸಂದರ್ಭವನ್ನು ನೋಡತಕ್ಕಂಥ ಅವಕಾಶ ನಮಗೆ ದೊರೆತದ್ದು ನಮ್ಮ ಸೌಭಾಗ್ಯ. ಆ ಸಂದರ್ಭದಲ್ಲಿ ಈಗ ಉಪ ಮುಖ್ಯಮಂತ್ರಿಗಳಾಗಿರತಕ್ಕಂಥ ಮಾನ್ಯ ಜೆ.ಹೆಚ್.ಪಟೇಲರವರು ಮತ್ತು ನಾವು ತಮಿಳುನಾಡಿನ ಮೂಲಕ ದೆಹಲಿಗೆ ಹೋಗಿ ರಾಜ್‌ಘಾಟ್ ನಲ್ಲಿ ನಡೆದಂತಹ ಒಂದು ಸಂದರ್ಭ ನಿಜವಾಗಿಯೂ ಕಣ್ಣು ಮುಂದೆ ಕಟ್ಟಿದ ಹಾಗಿದೆ. ನೂರನೆಯ ವರ್ಷಕ್ಕೆ ಕಾಲಿಟ್ಟಂತಹವರು. ನೂರು ವರ್ಷವನ್ನು ಮುಗಿಸಿ ಶತಮಾನೋತ್ಸವವನ್ನು ಆಚರಿಸಿದ್ದರೆ ನಮಗೆಲ್ಲರಿಗೂ ಬಹಳ ಸಂತೋಷವಾಗಿರುತ್ತಿತ್ತು. ನೂರನೇ ವರ್ಷಕ್ಕೆ

ಕಾಲಿಟ್ಟಂತಹ ಒಂದು ಸಂದರ್ಭ ಬಹಳ ಸಂತೋಷವಾಗಿತ್ತು. ಇತ್ತೀಚಿನ ದಿನಗಳಲ್ಲಿ ಅವರು ಆಸ್ಪತ್ರೆಗೆ ಸೇರಿದ ಮೇಲೆ ಕಳವಳ ಹೆಚ್ಚಾಗಿತ್ತು. ಇವತ್ತಂತೂ ವಿಷಮ ಪರಿಸ್ಥಿತಿ ಎಂದು ವರದಿಯಾದಾಗ ಯಾವ ಗಳಿಗೆಯಲ್ಲಿ ಏನಾಗುತ್ತದೆಯೋ ಎಂಬ ನೋವು ಮನಸ್ಸಿನಲ್ಲಿ ಕಾಡುತ್ತಿತ್ತು. ಅವರ ಅಗಲಿಕೆಯಿಂದ ಅತ್ಯಂತ ನೋವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಈ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ನೀಡಿ ನನ್ನ ಮಾತನ್ನು ಮುಗಿಸುತ್ತೇನೆ.

* Sri Quamurul Islam (Gulbarga): Speaker Sir, Sri Morarji Bhai Desai was a great freedom fighter. He was Gandhian. He served the people of this country in different capacities as Prime Minister, as a Deputy Prime Minister, as a Minister and as a Chief Minister of Bombay. He was a very good administrator. During his Prime Ministership, our country maintained very good relations with the neighbouring countries and also with the other countries of the World. Particulary, the relationship with Pakistan was very well maintained and Pakistan has given its highest award to Morarji Bhai Desai. To-day Morarji Bhai Desai is no more. But, his services to the people of this country is unforgettable. I pray Almighty Allah, may his soul rest in peace in Heaven and strength may be given to his family members to bear the loss. It is not a loss to the family of Morarji Bhai Desai. His death is a loss to the whole nation.

* ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ, ಈದಿವಸ ನಮ್ಮ ದೇಶ ತನ್ನ ಒಬ್ಬ ಮಹಾನ್ ಸುಪುತ್ರನನ್ನು ಕಳೆದುಕೊಂಡು ತಬ್ಬಲಿಯಾಗಿದೆ. ಇದನ್ನು ನಾವೆಲ್ಲರೂ ಒಪ್ಪಬೇಕಾದಂಥ ವಿಷಯ. ಶ್ರೀಯುತ ಮುರಾರ್ಜಿ ದೇಸಾಯಿಯವರು ಈ ದೇಶದ ಒಬ್ಬ ಪ್ರಾಮಾಣಿಕ ರಾಜಕಾರಣಿಗಳಲ್ಲಿ ಒಬ್ಬರು. ಇವೊತ್ತಿನ ದಿವಸ ಇಡೀ ದೇಶದ ರಾಜಕಾರಣದಲ್ಲಿ ಪ್ರಾಮಾಣಿಕತೆ ಎನ್ನತಕ್ಕಂಥದ್ದು ಬಹಳ ಅಪರೂಪ ಎನ್ನತಕ್ಕಂಥ ಪ್ರಶ್ನೆ ಗಂಭೀರವಾಗಿರತಕ್ಕಂಥ ಸಂದರ್ಭದಲ್ಲಿ ಈ ದೇಶದ ರಾಜಕಾರಣಕ್ಕೆ ಒಬ್ಬ ಪ್ರಾಮಾಣಿಕ ಆಧಾರ ಸ್ಥಂಭವಾಗಿದ್ದಂಥ ಶ್ರೀಯುತ ಮುರಾರ್ಜಿ ದೇಸಾಯಿಯವರು ತೀರಿಕೊಂಡಿರತಕ್ಕಂಥದ್ದು ಬಹಳ ದುಃಖಕರವಾದ ಸಂಗತಿ. ಹಲವಾರು ರೀತಿಯಾದಂತಹ ಗೊಂದಲಗಳು ಇದ್ದರೂ ಕೂಡ ಅವರು ಈ ದೇಶಕ್ಕೆ ತಮ್ಮದೇ ಆದಂಥ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರ ಬಗ್ಗೆ ಹಲವಾರು ರೀತಿಯ ಭಿನ್ನಾಭಿಪ್ರಾಯಗಳನ್ನು

ಹೊಂದಿದ್ದಂಥ ಜನಗಳೂ, ಕೂಡ ಅವರ ಬಗ್ಗೆ ಅಪರೂಪವಾದಂಥ ಗೌರವವನ್ನು ಇಟ್ಟಿದ್ದಾರೆ. ಉದಾಹರಣೆಗೆ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡತಕ್ಕಂಥ ಸಂದರ್ಭ ಈ ದೇಶಕ್ಕೆ ಬಂದಂಥ ಕಾಲದಲ್ಲಿ ಮೊರಾರ್ಜಿ ದೇಸಾಯಿಯವರು ಅದನ್ನು ಸ್ಪಷ್ಟವಾಗಿ ವಿರೋಧ ಮಾಡಿದರು. ಆ ಕಾರಣಕ್ಕಾಗಿ ದಿವಂಗತ ಇಂದಿರಾಗಾಂಧಿ ಯವರಿಂದ ಬೇರೆ ಆಗತಕ್ಕಂಥ ಸಂದರ್ಭ ಬಂತು. ಆದರೂ ಕೂಡ ಅಧಿಕಾರ ಹೋಗುತ್ತದೆ ಎನ್ನುವ ಯಾವುದೇ ರೀತಿಯಾದಂಥ ಭಯ ಇಲ್ಲದೇ ತಾವು ನಂಬಿದ್ದಂಥ ತತ್ವ ಬ್ಯಾಂಕುಗಳ ರಾಷ್ಟ್ರೀಕರಣ ಸರಿಯೋ, ತಪ್ಪೋ ಅದನ್ನು ಚರಿತ್ರೆ ತೀರ್ಮಾನ ಮಾತಕ್ಕಂಥದ್ದು. ಆದರೆ ಬ್ಯಾಂಕುಗಳ ರಾಷ್ಟ್ರೀಕರಣ ಸರಿಯಲ್ಲವೆಂದು ಹೇಳಿ ತನಗೆ ಇದ್ದಂಥ ಭಿನ್ನಾಭಿಪ್ರಾಯಕ್ಕೆ ತಾವು ಅಧಿಕಾರವನ್ನು ತ್ಯಜಿಸಿದಂಥ ಅಪರೂಪದ ವ್ಯಕ್ತಿ ತಾನು ನಂಬಿದಂತ ತತ್ವಕ್ಕೆ ಅದು ಎಂತಹದೆ ಸಂದರ್ಭ ಪರಿಸ್ಥಿತಿ ಬಂದರೂ ಕೂಡ ಆ ತತ್ವವನ್ನು ಬಿಡತಕ್ಕಂಥ ಮನುಷ್ಯರಾಗಿರಲಿಲ್ಲ ಆದರೆ ಈಗಿನ ಪರಿಸ್ಥಿತಿಯಲ್ಲಿ ನಾವು ಅದನ್ನು ನೋಡಿದಾಗ ತಮ್ಮ ಅಧಿಕಾರಸ್ಥಾನಕ್ಕೆ ಏನಾದರೂ ಚ್ಯುತಿ ಬರತಕ್ಕಂಥ ಪರಿಸ್ಥಿತಿ ಬಂದರೆ ಈಗಿನ ಪರಿಸ್ಥಿತಿಯಲ್ಲಿ ರಾಜಕಾರಣಗಳು ತಮ್ಮ ಎಲ್ಲಾ ಭಾವನೆಗಳನ್ನು ರಾಜೀ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿಯನ್ನು ನಾವು ನೋಡುತ್ತೇವೆ. ಆದರೆ ಆ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮೊರಾರ್ಜಿಯವರು ಈ ದೇಶದ ನಮ್ಮೆಲ್ಲರಿಗೂ ಕೂಡ ಮೇಲ್ಪಂಕ್ತಿಯಾಗಿದ್ದಾರೆ. ತಾವು ನಂಬಿದ ತತ್ವಕ್ಕೆ ಅದು ಎಷ್ಟೇ ಕಷ್ಟ ಎಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದರೂ ಕೂಡ ಆ ತತ್ವಕ್ಕೆ ಅವರು ಅಂಟಿಕೊಂಡಂಥವರು ಈ ರೀತಿ ವಿರಳವಾದಂಥ ಜನ ನಮ್ಮ ರಾಜಕಾರಣಿಗಳಲ್ಲಿ ಕಡಿಮೆಯಾಗುತ್ತಿದ್ದಾರೆ. ಅಂತಹ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ದೇಶಪ್ರೇಮಿ ಮತ್ತು ಬಹಳ ಸರಳ ಪ್ರಾಮಾಣಿಕ ನಿಷ್ಠೂರತೆಯ ವ್ಯಕ್ತಿತ್ವವನ್ನು ಹೊಂದಿದ್ದಂತಹ ಮೊರಾರ್ಜಿ ದೇಸಾಯಿಯವರು ದಿವಂಗತರಾಗಿರತಕ್ಕಾಂಥದ್ದು ನಮ್ಮ ದೇಶಕ್ಕೆ ತುಂಬಲಾರದ ನಷ್ಟವುಂಟಾಗಿದೆ ಎಂದು ಹೇಳಿ, ನಾನು ನಮ್ಮ ಪಕ್ಷದ ಪರವಾಗಿ ನನ್ನ ಪರವಾಗಿ ಇವರಿಗೆ ಸಂತಾಪವನ್ನು ಸೂಚಿಸಿ ಮಾನ್ಯ ಸಭಾನಾಯಕರು ಮಂಡಿಸತಕ್ಕಂತಹ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣವಾದಂತಹ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

Sri. B. I. Patil (Uchagaon) : Mr. Speaker Sir, the death of sri Morarji Desai is a very, very sudden and sad news to one and all. In the death of Morarji Desai, our country has lost a great administrator and a veteran freedom fighter. He was a great personality who earned name and fame not only in our country, but throughout the world. He was the real follower of Gandhian Philosophy, who led a simple life till his death. He served our country as the Prime Minister. He was the Chief Minister of the Bombay State. He

also held several important portfolios in the centre. He will be remembered for a very long time to come. On behalf of MES, we deeply mourn the death of Sri Morarji Desai.

6.30. ಪಿ.ಎಂ

* ಶ್ರೀ ಕೆ.ಎನ್.ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಸಭಾಧ್ಯಕ್ಷರೇ, ಎಲ್ಲಾ ಹಿರಿಯರು ಮೊರಾರ್ಜಿದೇಸಾಯಿಯವರ ಸ್ವಾತಂತ್ರ್ಯ ಹೋರಾಟ. ರಾಜಕೀಯ ಹುದ್ದೆಯಲ್ಲಿ ಅವರು ಮಾಡಿದಂತಹ ಸೇವೆ, ಅವರ ಪ್ರಾಮಾಣಿಕತೆ ಮತ್ತು ಹರವಾರ ಇವುಗಳ ಬಗ್ಗೆ ಮಾತನಾಡಿದ್ದಾರೆ. ಹಠವಾದಿ ಆಗಬೇಕಾದರೆ ಸುಮ್ಮನೆ ಹಠವಾದಿ ಆಗುವುದಕ್ಕೆ ಆಗುವುದಿಲ್ಲ. ಎಲ್ಲಿ ಸತ್ಯ ಇರುತ್ತದೆಯೋ ಅಲ್ಲಿ ಹಠ ಇರುತ್ತದೆ, ಎಲ್ಲಿ ಪ್ರಾಮಾಣಿಕತೆ ಇರುತ್ತದೆಯೋ ಅಲ್ಲಿ ಇರುತ್ತದೆ. ಸ್ವಾತಂತ್ರ್ಯ ಹೋರಾಟ ಎಂದಾಗ ನನಗೆ ಒಂದು ನೆನಪು ಬರುತ್ತದೆ. ಹದಿನಾಲ್ಕು ವರ್ಷಗಳ ಹಿಂದೆ ಜಲಿಯನ್ ವಾಲಾ ಬಾಗ್ ದುರಂತ ನಡೆದಂಥ ಸ್ಥಳದಲ್ಲಿ ನೋಡಿದಾಗ ಈ ದೇಶದಲ್ಲಿ ಎಷ್ಟು ಜನ ಯಾವ ಮಟ್ಟಿದ ಬಲಿದಾನವನ್ನು ಮಾಡಿದರು. ಗಾಂಧೀ ಕುಟೀರವನ್ನು ನೋಡಿದಾಗ ಇಪ್ಪತ್ತು ವರ್ಷಗಳ ಕಾಲ ನಿರಂತರವಾಗಿ ಗಾಂಧೀಜಿಯವರು ಜೈಲಿನಲ್ಲಿದ್ದರು. ಐದಾರು ವರ್ಷಗಳ ಕಾಲ ಶ್ರೀ ಮೊರಾರ್ಜಿಯವರು ಜೈಲಿನಲ್ಲಿದ್ದರು. ಎಂಬಂಥ ವಿಷಯಗಳನ್ನು ನಾವೆಲ್ಲ ಕೇಳಿದ್ದೇವೆ. ನಿಜವಾಗಲೂ ಆ ಚಿತ್ರಗಳನ್ನು ನೋಡಿದರೆ ಎಷ್ಟೊಂದು ಜನ ಪ್ರಾಣ ಕೊಟ್ಟಿದ್ದಾರೆ. ಎಷ್ಟೊಂದು ಜನ ಈ ದೇಶಕ್ಕೋಸ್ಕರ ತಮ್ಮ ಬಲಿದಾನವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಕೆಲವು ಸಂದರ್ಭಗಳಲ್ಲಿ ''ಓ ಲೋಗ್ ಕಡಾ ಹೈ'' ಎನ್ನುವ ಟಿ.ವಿ.ಸೀರಿಯಲ್‌ನಲ್ಲಿ ಬಂದಿದೆ. ದೇಹವನ್ನು ಮಾರಿಕೊಂಡು ಜೀವನ ಮಾಡತಕ್ಕಂಥ ಒಬ್ಬ ಹೆಣ್ಣು ಮಗಳು ಈ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ತನ್ನ ಪ್ರಾಣವನ್ನೇ ಯಾವರೀತಿ ಕೊಟ್ಟಳು, ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಅವರ ಮನೆಯಲ್ಲಿ ಸೇರಿಕೊಂಡಾಗ ಅವನ ತಲೆಗೆ ಬೆಲೆ ಕಟ್ಟಿದ್ದರು. ಆಗ ಅಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ವ್ಯಕ್ತಿ ಹಣದ ಆಸೆಗಾಗಿ ಆ ಸ್ವಾತಂತ್ರ್ಯ ಹೋರಾಟಗಾರರನ್ನು ಹಿಡಿದುಕೊಟ್ಟಂಥ ಕೆಲಸ ಮಾಡುತ್ತಾನೆ. ಆ ಕೆಲಸ ಮಾಡಿದಾಗ ಸುಮಾರು ಬ್ರಿಟೀಷ್ ಸಿಪಾಯಿಗಳು ಆ ಮನೆಯನ್ನು ಸುತ್ತುವರಿದು ಆಕ್ರಮಣವನ್ನು ಮಾಡುತ್ತಾರೆ. ಆಗ ಆ ಸ್ವಾತಂತ್ರ್ಯ ಹೋರಾಟಗಾರನನ್ನು ಅಟ್ಯಾಕ್ ಮಾಡಿದಾಗ ಅವನು ಈ ರೀತಿ ಹೇಳುತ್ತಾನೆ, ನೀನು ಒಬ್ಬ ದೇಹವೆನ್ನು ಮಾರಿಕೊಂಡು ಜೀವನ ಮಾಡತಕ್ಕಂಥ ಮಹಿಳೆ, ನೀನು ದೇಶವನ್ನೇ ಬೆಲೆ ಕಟ್ಟಿಮಾಡತಕ್ಕಂಥ ಕೀಳು ಗುಣ ನಿನ್ನಲ್ಲಿ ಇದೆ ಎಂದು ಅವ್ಯಾಚ ಶಬ್ಧಗಳಿಂದ ಆಕೆಯನ್ನು ಬೈಯ್ಯುತ್ತಾನೆ. ಆಗ ತಕ್ಷಣ ಅವನ ಹತ್ತಿರ ಇದ್ದಂಥ ರಿವಾಲ್ವರ್‌ನ್ನು ಕೈಗೆ ತೆಗೆದುಕೊಂಡು ತಕ್ಷಣ ಅವನ ಮೇಲೆ ಹೊಡೆಯುತ್ತಾರೆ. ಆಗ ತಕ್ಷಣ ಸ್ವಾತಂತ್ರ್ಯ ಹೋರಾಟಗಾರ ತಪ್ಪಿಸಿಕೊಂಡು ಹೋಗುತ್ತಾನೆ ಮತ್ತು ತನ್ನ ಪ್ರಾಣವನ್ನು ಬಲಿ ಕೊಡುತ್ತಾನೆ. ಅಂದರೆ ಈ

ದೇಶದಲ್ಲಿ ಸ್ವಾತಂತ್ರ್ಯ ಹೋರಾಟ, ಜೈಲು ಇಂಥವುಗಳನ್ನು ನೆನಪು ಮಾಡಿಕೊಂಡಾಗ ಎಂಥೆಂಥ ತ್ಯಾಗಗಳು ಆಗಿದೆ ಅದನ್ನು ಯೋಚನೆ ಮಾಡಬೇಕು. ಬರೀ ಅವರ ಆತ್ಮಕ್ಕೆ ಶಾಂತಿ ಕೋರುವುದರ ಮೂಲಕ ನಾವೇನು ಸಾಧನೆ ಮಾಡಿದ ಹಾಗಾಯ್ತು, ಇದು ಇವೊತ್ತು ಒಂದು ದಿವಸಕ್ಕೆ ಅಷ್ಟೇ ಸೀಮಿತ. ಅವರ ಗುಣಗಳನ್ನು ಅವರ ಆದರ್ಶಗಳನ್ನು ಅವರ ಧ್ಯೇಯಗಳನ್ನು ನಾವೆಲ್ಲಾ ಬೆಳೆಸಿಕೊಂಡರೆ ಅದಕ್ಕಿಂತ ದೊಡ್ಡ ಶಾಂತಿ ಅವರ ಆತ್ಮಕ್ಕೆ ಬೇರೆ ದೊರೆಯಲಾರದು ಎಂಬುದನ್ನು ಕೇಳಿ ಸಭಾನಾಯಕರು ದಿವಂಗತರ ಆದರ್ಶಗಳು, ವಿಚಾರಗಳಾದಿಯಾಗಿ ತಿಳಿಸಿ ಅವರ ಆತ್ಮಕ್ಕೆ ಶಾಂತಿ ಕೋರಿ ತಂದಿರುವ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಮುನಿಯಪ್ಪ (ಗಾಂಧೀನಗರ) : ಸನ್ಮಾನ್ಯ ಅಧ್ಯಕ್ಷರೇ, ಭಾರತ ದೇಶದ ಉಪಪ್ರಧಾನಿಗಳಾಗಿ, ಮಂಬೈ ಪ್ರಾಂತ್ಯದ. ಮುಖ್ಯಮಂತ್ರಿಗಳಾಗಿ ಭಾರತ ದೇಶದ ಪ್ರಧಾನಮಂತ್ರಿಗಳಾಗಿ, ಭಾರತ ದೇಶದ ರಾಜಕೀಯ ಇತಿಹಾಸ ಪುಟಗಳಲ್ಲಿ ಸುವರ್ಣ ಅಕ್ಷರಗಳಲ್ಲಿ ಬರೆದಿರುವಂಥ' ಒಂದು ಅಧ್ಯಾಯ ಪ್ರಾರಂಭ ಮಾಡಿದಂಥವರು ದಿವಂಗತ ಮೊರಾರ್ಜಿ ದೇಸಾಯಿಯವರು. ಅವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ರೂ.2-50 ಪೈಸೆಗೆ ಒಂದು ಕೆ.ಜಿ.ಸಕ್ಕರೆ ಈ ್ಭಾಗದ ದೇಶಧ ಉದ್ದಗಲದಲ್ಲಿ ದೊರೆಯುತ್ತಿತ್ತು. ಅವರು ಪ್ರಧಾನ ಮಂತ್ರಿಗಳಾದಂತಹ ಸಂದರ್ಭದಲ್ಲಿ ಈ ದೇಶದ 25 ರಾಜ್ಯಗಳಲ್ಲಿ ಯಾವ ರಾಜ್ಯದಲ್ಲಿ ಯಾವ ಪಕ್ಷ ಆಡಳಿತ ನಡೆಸಿದರೂ ಕೂಡ ಅವರು ಸ್ವಂತ ಪಕ್ಷವಾಗಿರಬಹುದು, ವಿರೋಧಪಕ್ಷಗಳಾಗಿರಬಹುದು, ಯಾವ ಪಕ್ಷದ ಆಡಳಿತಕ್ಕೂ ಅವರು ಆರ್ಥಿಕ ನೆರವನ್ನು ಕೊಡುವುದರಲ್ಲಿ ಕಡಿಮೆ ಮಾಡುತ್ತಿರಲಿಲ್ಲ. ಎಲ್ಲಾ ರಾಜ್ಯಗಳನ್ನು ಸರಿಸಮಾನವಾಗಿ ನೋಡಿ ಆಡಳಿತವನ್ನು ನಡೆಸಿದರು. ಅವರು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ, ಈ ದೇಶದ ತಂದೆ ಎಂದು ಕರೆಯತಕ್ಕಂತಹ ಮಹಾತ್ಮ ಗಾಂಧಿಜಿಯವರು, ಬ್ರಿಟಿಷರೆ ಭಾರತದಿಂದ ಕಾಲ್ತೆಗೆಯಿರಿ ಎನ್ನತಕ್ಕ ಘೋಷಣೆ ನೀಡಿದ ಸಂದರ್ಭದಲ್ಲಿ, ಮಹಾತ್ಮ ಗಾಂಧಿಜಿಯವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮಿಕಿದಂಥವರು. ಶಿಸ್ತಿನ ಸಿಪಾಯಿಗಳಾಗಿ ಈ ದೇಶದ ರಾಜಕಾರಣ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ಅವರು ಆದರ್ಶರಾಗಿ ನಮ್ಮೆಲ್ಲರಿಗೂ ಇರುತ್ತಾರೆ. ಅಂತಹ ಒಬ್ಬ ಮಹಾನ್ ನಾಯಕ ಇವತ್ತು ನಮ್ಮಿಂದ ಕಣ್ಮರೆಯಾಗಿದ್ದಾರೆ. ಅವರೇನು ಈ ದೇಶಕ್ಕೆ ಬಿಟ್ಟುಹೋಗಿದ್ದಾರೆ, ಅವರೇನು ಮೇಲ್ಪಂಕ್ತಿಯನ್ನು ಹಾಕಿದ್ದಾರೆ, ಅವರು ಕಂಡಂಥ ಕನಸುಗಳನ್ನು ನನಸಾಗಿಸುವ ದಾರಿಯಲ್ಲಿ ನಾವು ಸಾಗೋಣ. ಅವರನ್ನು ಕಳೆದುಕೊಂಡ ಅವರ ಕುಟುಂಬವರ್ಗದವರಿಗೆ ಪ್ರಕೃತಿ ಶಕ್ತಿಯನ್ನು ನೀಡಲೆಂದು ನಾನು ಅಖಿಲಬಾರತ ಅಣ್ಣಾ ಡಿ.ಎಂ.ಕೆ. ಪಕ್ಷದ ಪರವಾಗಿ ಮುರಾರ್ಜಿ ದೇಸಾಯಿಯವರ ಸಂತಾಪಸೂಚಕ ನಿರ್ಣಯಕ್ಕೆ ನನ್ನ ಸಂತಾಪವನ್ನು ವ್ಯಕ್ತಪಡಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ವೈ. ರಾಮಕೃಷ್ಣ (ಅನೇಕಲ್) : ಸನ್ಮಾನ್ಯ ಅಧ್ಯಕ್ಷರೇ, ಮುರಾರ್ಜಿಯವರ ನಿಧನದ ಸುದ್ದಿ ಕೇಳಿ ನಾನಂತು ದಿಗ್ಭ್ರಾಂತನಾಗಿದ್ದೇನೆ. ಅನೇಕ ವರ್ಷಗಳ ಕಾಲ ಅವರ ಆಶೀರ್ವಾದ ಪಡೆದು ಅವರ ಜೊತೆಯಲ್ಲಿ ಕೆಲಸ ಮಾಡಿದಂತವನಾಗಿದ್ದೇನೆ. ಅವಿಭಾಜ್ಯ ಕಾಂಗ್ರೆಸ್‌ನಲ್ಲಿ ನನಗೆ ಮಾರ್ಗದರ್ಶನ ಮಾಡಿದರು. ಕಾಂಗ್ರೆಸ್ ಇಬ್ಭಾಗವಾಗಿ (ಒ) ಕಾಂಗ್ರೆಸ್‌ನಲ್ಲಿದ್ದಾಗ ನನಗೆ ಹೆಚ್ಚು ಕಡಿಮೆ ಒಂದು ಮುಖಂಡತ್ವದ ಸ್ಥಾನವನ್ನು ಕಲ್ಪಿಸಿಕೊಟ್ಟಂಥವರು. ಜನತಾ ಪಾರ್ಟಿಯಲ್ಲಿದ್ದಾಗ, ನಮ್ಮ ನಾಯಕರಿಗೂ ಗೊತ್ತಿದೆ. ಬಹುಶಃ ಇಡೀ ಭಾರತ ದೇಶಕ್ಕೆ ಏಕೈಕ ಹರಿಜನ ಸದಸ್ಯನಾಗಿ ಕಾರ್ಯಕಾರಿ ಸಮಿತಿಗೆ ನನ್ನನ್ನು ನಾಮಕರಣ ಮಾಡಿದಂತ ಕೀರ್ತಿ ಅವರಿಗೆ ಸಲ್ಲತಕ್ಕಂತಹದ್ದು. ಅಷ್ಟೇ ಅಲ್ಲ, ಬಹಳ ಜನರಿಗೆ ಗೊತ್ತಿಲ್ಲ. ಇವತ್ತು ನಾವು ಏನು ಮಂಡಲ್ ಕಮಿಷನ್ ಎಂದು ಹೇಳುತ್ತೇವೆ, ಅದರ ಆತರ್ ಅವರಾಗಿದ್ದಾರೆ ಅಧ್ಯಕ್ಷರೆ ನನಗೆ ನೆನಪಾಗುತ್ತದೆ, ಅವರು ಪ್ರಧಾನಮಂತ್ರಿಗಳಾದ ಕೂಡಲೇ ಗ್ವಾಲಿಯರ್‌ನ ರಾಜಮಾತೆಯ ಮನೆಯಲ್ಲಿ ಈ ವಿಧೇಯಕವನ್ನು ನೀನು ಮಂಡಿಸಬೇಕು, ರಾಷ್ಟ್ರದಲ್ಲಿರತಕ್ಕಂಥಹ ಎಲ್ಲಾ ರಾಜ್ಯಗಳ ಹಿಂದುಳಿದ ವರ್ಗಗಳ ವರದಿಗಳನ್ನು ಓದಿ, ಅದನ್ನು ಕ್ರೋಢೀಕರಿಸಿ ಒಂದು ವರದಿಯನ್ನು ನೀನು ಕೊಡಬೇಕು ಎನ್ನತಕ್ಕಂತಹ ಒಂದು ಜವಾಬ್ದಾರಿಯನ್ನು ನನಗೆ ಅವರು ಕೊಟ್ಟಿದ್ದರು. ನಾಯಕರಾದಂತಹ ಸನ್ಮಾನ್ಯ ಶ್ರೀ ದೇವೇಗೌಡರು ಕೂಡ ಅಲ್ಲಿದ್ದರು. ಸುಮಾರು ಎರಡು ಗಂಟೆಗಳ ಕಾಲ ಭಾಷಣ ಮಾಡಿ ನಂತರ ಒಂದು ನಿರ್ಣಯ ತೆಗೆದುಕೊಂಡು ಮಂಡಲ್‌ರವರನ್ನು ನಾವು ನೇಮಕ ಮಾಡಿದೆವು. ಮಂಡಲ್‌ರವರು ವರದಿ ಕೊಟ್ಟ ನಂತರ ಅದು ಜಾರಿಗೆ ಬಂತು. ಅದು ಬಹಳ ಜನಕ್ಕೆ ಗೊತ್ತಿಲ್ಲ. ಸಾಮಾನ್ಯವಾಗಿ ಮಂಡಲ್ ಎಂದರೆ ಏನು ಹೇಳುತ್ತಾರೆಂದರೆ ಅದು ಇತ್ತೀಚಿಗೆ ಬಂದದ್ದೆಂದು ಹೇಳುತ್ತಾರೆ. ಅದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಿಂದುಳಿದ ವರ್ಗಗಳ ಬಗ್ಗೆ ಅವರ ಕಳಕಳಿ ಹೇಗಿತ್ತು ಎನ್ನತಕ್ಕಂತಹ ವಿಚಾರವನ್ನು ಇಲ್ಲಿ ನಾನು ಹೇಳುತ್ತಿದ್ದೇನೆ. ಹರಿಜನರ ಬಗ್ಗೆ ಅಷ್ಟೆ, ಯಾವುದು ಮಹಾತ್ಮಗಾಂಧಿಯವರಿಗೆ ಪ್ರಿಯವಾಗಿತ್ತೋ ಅದು ಇವರಿಗೆ ಪ್ರಿಯವಾಗಿತ್ತು. ನಾನು ನಿಜವಾಗಿ ಹೇಳಬೇಕೆಂದರೆ, ಪ್ರೊಹಿಬಿಷನ್ ಇರಬಹುದು, ಹರಿಜನರ ಅಪ್ಲಿಫ್ಟ್‌ಮೆಂಟ್ ಇರಬಹುದು, ಖಾದಿ ಧಾರಣೆಯಿರಬಹುದು, ಗೋವಿನ ಪೂಜೆಯಿರಬಹುದು, ಯಾವುದನ್ನು ರಚನಾತ್ಮಕ ಕಾರ್ಯಗಳೆಂದು ಮಹಾತ್ಮಗಾಂದಿಜಿಯವರು ಹೇಳಿದ್ದರೋ, ಅವುಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಅವರು ಮುಂಚೂಣಿಯಲ್ಲಿದ್ದರು. ಉದಾಹರಣೆಗೆ ತಮಗೆ ಹೇಳಬೇಕೆಂದರೆ, ರಾಷ್ಟ್ರದಲ್ಲೇ ಪ್ರಪ್ರಥಮಬಾರಿಗೆ ಜಗಜೀವನ್‌ರಾಂರವರನ್ನು ಉಪ ಪ್ರಧಾನಮಂತ್ರಿಗಳನ್ನಾಗಿ ಮಾಡಿದ್ದರು. ತಪಾಸೆ ಎನ್ನತಕ್ಕಂತಹ ಒಬ್ಬ ಹರಿಜನರನ್ನು, ಅವರು ಪ್ರಧಾನಮಂತ್ರಿಗಳಾಗಿದ್ದಾಗ ರಾಜ್ಯಪಾಲರನ್ನಾಗಿ ಮಾಡಿದರು. ಹಾಗೆ, ಹರಿಜನರಾದ ಜ್ಯೋತಿವೆಂಕಟಾಚಲಾರವರನ್ನು ಕೇರಳದ ರಾಜ್ಯಪಾಲರನ್ನಾಗಿ ಮಾಡಿದರು. ನಮ್ಮ ಸನ್ಮಾನ್ಯ ಶ್ರೀ ಹನುಮಂತಯ್ಯನವರನ್ನು ಆಡಳಿತ ಮಂಡಳಿಯ ಅಧ್ಯಕ್ಷರನ್ನಾಗಿ ಮಾಡಿದರು. ಅನೇಕ ವಿಧದಲ್ಲಿ ದೀನದಲಿತರ ಸೇವೆಯನ್ನು ಮನಮುಟ್ಟುವ ರೀತಿಯಲ್ಲಿ ಅವರು ಮಾಡಿದ್ದಾರೆ. ನಿಜವಾಗಿಯೂ ಕೂಡ ಅವರ

ಅಗಲಿಕೆ ನನ್ನ ವೈಯಕ್ತಿಕ ನಷ್ಟ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಮತ್ತು ಹಿರಿಯ ಮುಖಂಡರು, ಸ್ವಾತಂತ್ರ್ಯ ವಾದಿಗಳು ಗಾಂಧಿವಾದಿಗಳಾದ ಮುರಾರ್ಜಿಯವರ ಅಗಲಿಕೆಯಿಂದ ಬಹುಶಃ ಇವತ್ತು ಒಂದು ತಲೆಮಾರು ಹೋದ ಹಾಗೆ ಆಯಿತು. ಒಂದು ತಲೆಮಾರಿನ ಯುಗಪುರಷರು ಎಂದು ಏನು ಹೇಳುತ್ತೇವೆ ಆ ತಲೆಮಾರು ಅಂತ್ಯವಾದಂತಾಯಿತು. ಅವರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತನು ಕೊಡಲೆಂದು ಪ್ರಾರ್ಥನೆ ಸಲ್ಲಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

* ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ) : ಸನ್ಮಾನ್ಯ ಸಭಾಧ್ಯಕ್ಷರೇ, ಸಭಾನಾಯಕರು ತಂದಿರತಕ್ಕಂತಹ ನಿರ್ಣಯವನ್ನು ಅನುಮೋದಿಸುತ್ತಾ, ಮುರಾರ್ಜಿಯವರನ್ನು ನೆನೆಸಿಕೊಂಡಾಗ ಬಹುಶಃ ಅವರು ಮುರಾರ್ಜಿ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ. ಮುರಾರ್ಜಿಯವರ ಪರಂಪರೆ ಎಂದರೆ ಎರಡು ರೀತಿಯದು. ಆಡಳಿತದಲ್ಲಿ ಅವರನ್ನು ನೆಹರು ಪರಂಪರೆ ಎಂದು ಹೇಳುವುದಕ್ಕೆ ಬರುವುದಿಲ್ಲ. ವಲ್ಲಬಾಯ್ ಪಟೇಲರ ಪರಂಪರೆ ಎಂದು ನಾವು ಹೊಲಿಸಿಕೊಳ್ಳಬಹುದು. ಆದರ್ಶದಲ್ಲಿ ಮಹಾತ್ಮ ಗಾಂಧೀಜಿಯವರ ಪರಂಪರೆ ಎಂದು ಹೇಳಬಹುದು. ಅವರು ಗಾಂಧಿವಾದಿಗಳಾಗಿದ್ದುಕೊಂಡು ಮಹಾತ್ಮಗಾಂಧಿ ಅನುಯಾಯಿಗಳಾಗಿದ್ದುಕೊಂಡು ಆ ತತ್ವವನ್ನು ನಂಬಿ ಆ ಸ್ಥಾನಕ್ಕೆ ಬಂದರು. ಸ್ವಾತಂತ್ರ್ಯ ಬಂದ ಮೇಲೆ , ಈ ಅಧಿಕಾರಕ್ಕೆ ಹೋರಾಟ ಎನ್ನುವುದರಲ್ಲಿ ಈ ಆದರ್ಶವಾದಿಗಳು ತತ್ಪಾಪಿ ಗಾಂಧಿವಾದಿಗಳು ಎನಿಸಿಕೊಂಡವರನ್ನೆಲ್ಲಾ ಈ ವ್ಯವಸ್ಥೆಯಲ್ಲಿ ಮೂಲೆಗೆ ತಳ್ಳಿದರು. ಆದರೆ ಆದಾಗ್ಯೂ ಮುರಾರ್ಜಿಯರೊಬ್ಬರು ಪ್ರಧಾನಮಂತ್ರಿಯಾದರು. ಅಂದರೆ ಇವರಿಗೆ ಪ್ರಧಾನಮಂತ್ರಿಗಳಾದಾಗ ಮರ್ಯಾದೆ ಬಂತೆಂದು ಅಲ್ಲ. ಆ ಪ್ರಧಾನಮಂತ್ರಿಗಳ ಪಟ್ಟಕ್ಕೆ ಇವರು ಕುಳಿತದ್ದರಿಂದ ಆ ಸ್ಥಾನಕ್ಕೆ ಮರ್ಯಾದೆ ಬಂತು ಎಂದು ನಾನು ತಿಳಿದುಕೊಂಡಿದ್ದೇನೆ. ಸ್ವತಂತ್ರ ಭಾರತದಲ್ಲಿ ಗಾಂಧಿವಾದಿಗಳೊಬ್ಬರು ಪ್ರಧಾನ ಮಂತ್ರಿಗಳಾಗಿರತಕ್ಕಂತಹದ್ದು ಸಮಾಧಾನ ಹಾಗೂ ಸಂತೋಷ ತರತಕ್ಕಂತಹ ಒಂದು ಸಂಗತಿಯಾಗಿ ಉಳಿದುಕೊಳುತ್ತದೆಂದು ನಾನಾದರೂ ಅಂದುಕೊಳ್ಳುತ್ತೇನೆ. ಇನ್ನು ಅವರು ಎಷ್ಟು ಸರಳವಾದಿಗಳೆಂದರೆ, ನಮ್ಮ ವ್ಯವಸ್ಥೆಯಲ್ಲಿ ಮಾಜಿ ಪ್ರಧಾನಮಂತ್ರಿಗಳ ವ್ಯವಸ್ಥೆಗೆಂದು ವರ್ಷಕ್ಕೆ 12 ಕೋಟಿ ರೂಪಾಯಿಗಳ ಬಜೆಟನ್ನು ತೆಗೆದು ಇಡತಕ್ಕಂತಹ ಪರಂಪರೆಯನ್ನು ನಾವು ಹಾಕಿಕೊಂಡಿದ್ದೇವೆ. ಇಷ್ಟೊಂದು ಇದ್ದರು ಕೂಡ ಅವರು ಯಾರಿಗೂ ಭಾರವಾಗಲಿಲ್ಲ, ಹೊರೆಯಾಗಲಿಲ್ಲ, ಸರ್ಕಾರಕ್ಕೂ ಸಹ ಹೊರೆಯಾಗಲಿಲ್ಲ. ಅದೂ ಸಹ ಅವರು ಬಿಟ್ಟುಹೋಗಿರತಕ್ಕಂತಹ ಪರಂಪರೆ. ಈ ದಿನ ಮುರಾರ್ಜಿಯವರು ಇನ್ನು ಮುಂದೆ ನಮ್ಮ ಜೊತೆಯಲ್ಲಿ ಇಲ್ಲದೆ ಇದ್ದರೂ ಕೂಡ, ಅವರು ಹಾಕಿಕೊಟ್ಟ ಆದರ್ಶಗಳು ನಮಗೆ ಮಾರ್ಗ ದರ್ಶನವಾಗುತ್ತದೆ ಎಂದು ನೆನಸಿಕೊಂಡು ಅವರಿಗೆ ಶ್ರದ್ಧಾಂಜಲಿ ಕೋರಿ, ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಮುರಾರ್ಜಿಯವರ ನಿಧನದಿಂದ ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ.

ನಾನೊಂದು ವಿಷಯವನ್ನು ನಮ್ಮ ಎಲ್ಲಾ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಮೀಸಲಾತಿಯ ಬಗ್ಗೆ ಲೋಕಸಭೆಯಲ್ಲಿ ಒಂದು ಸಾರಿ ಚರ್ಚೆ ಬಂದಾಗ ಅವರು ಒಂದು ಮಾತನ್ನು ಹೇಳುತ್ತಾರೆ, ಪರಿಶಿಷ್ಟ ಜಾತಿಯವರು ಎಲ್ಲಿಯವರೆಗೆ ಅವರು ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೆ ಈ ಮೀಸಲಾತಿ ಇರಬೇಕೆಂದು ಹೇಳುತ್ತೇನೆ ಎಂದು ಹೇಳಿದರು. ಬಹುತೇಕ ಅವರೊಬ್ಬರನ್ನು ಬಿಟ್ಟರೆ ಈ ಮಾತನ್ನು ಹೇಳಿದವರನ್ನು ಮತ್ತೆ ಯಾರನ್ನು ನಾನಂತೂ ಕಂಡಿಲ್ಲ. ಅವರ ಜೊತೆಗೆ ನಮ್ಮ ಶ್ರೀ ವೈ.ಕೆ.ರಾಮಕೃಷ್ಣಪ್ಪರವರು ಹೇಳಿದ ಹಾಗೆ ಹಿಂದುಳಿದವರ ಬಗ್ಗೆಯು ಕೂಡ ಅಷ್ಟೇ ಅನುಕಂಪವಿತ್ತು. ಅವರು ಪ್ರಧಾನಿಗಳಾಗಿದ್ದಾಗಲೇ ಮಂಡಲ್ ಆಯೋಗವನ್ನು ರಚಿಸಿದರು. ಬಹುತೇಕ ಕಾರಣಾಂತರಗಳಿಂದ ಅವರು ವರದಿಯನ್ನು ಎರಡು ಮೂರು ವರ್ಷಗಳಲ್ಲಿ ಕೊಟ್ಟರು ಸಹ ಬಹಳ ದಿವಸಗಳವರೆಗೆ ಅದು ಜಾರಿಗೆ ಬರಲಿಲ್ಲ. ಆದರೆ ವಿ.ಪಿ.ಸಿಂಗ್‌ರವರು ಅದನ್ನು ಜಾರಿಗೆ ತಂದಾಗ ಒಂದು ರೀತಿಯಲ್ಲಿ ಇಡೀ ರಾಷ್ಟ್ರದಲ್ಲೇ ಒಂದು ಶೋಭೆಯಾಯಿತು. ಆ ಸಂದರ್ಭದಲ್ಲಿ ಒಂದು ಮಾತನ್ನು ಮುರಾರ್ಜಿಯವರು ಹೇಳಿದ್ದರು. ಅದರ ಷೇಪರ್ ಕಟಿಂಗ್ಸ್‌ನ್ನು ನಾನು ಇಟ್ಟುಕೊಂಡಿದ್ದೇನೆ. ಇವತ್ತು ಹಿಂದುಳಿದವರ್ಗದವರ ಬಗ್ಗೆ ಏನಾದರೂ ಈ ಒಂದು ಮೀಸಲಾತಿ ಇದ್ದರೆ ಬಹುತೇಕ ಪ್ರಗತಿಯಾಗುವುದಿಲ್ಲವೆಂದು ಹೇಳಿದರು. ಆದರಿಂದ ಈ ಎರಡು ವಿಷಯಗಳನ್ನು ನೋಡಿದರೆ ಅವರಿಗೆ ಹಿಂದುಳಿದ ವರ್ಗದವರ ಬಗ್ಗೆ, ಪರಿಶಿಷ್ಟಜಾತಿಯವರ ಬಗ್ಗೆ ಎಷ್ಟು ಅನುಕಂಪವಿತ್ತು ಎಂದು ನಾವು ಇವತ್ತಿನದಿವಸ ಯೋಚನೆ ಮಾಡಬೇಕಾಗುತ್ತದೆ. ಅಂತಹವರು ಇವತ್ತಿನ ದಿವಸ ಕಣ್ಮರೆಯಾಗಿರುವುದು ನಮಗೆ ತುಂಬಲಾರದ ನಷ್ಟವಾಗಿದೆ. ಅದಕ್ಕೆ ನಮ್ಮ ಸರ್ಕಾರ, ನಾವೂ ಸಹ ನಮ್ಮ ಕರ್ನಾಟಕದಲ್ಲಿ ಅವರಿಗೆ ನೂರು ವರ್ಷಗಳು ತುಂಬಿದ ಮೇಲೆ ಶತಮಾನೋತ್ಸವವನ್ನು ಆಚರಿಸಿದೆವು. ಅದರ ಜೊತೆಗೆ ನಮ್ಮ ಸರ್ಕಾರ ಅವರ ಹೆಸರಿನಲ್ಲಿ ಇವತ್ತಿನಿಂದ ವಸತಿ ಶಾಲೆಗಳನ್ನು ತೆಗೆಯಬೇಕೆಂದು ಈಗಾಗಲೇ ತೀರ್ಮಾನ ಮಾಡಿದೆ. ಈಗ ನಾವು ಅವರನ್ನು ನೆನಪಿಸಿಕೊಳ್ಳುತ್ತಾ, ಮುರಾರ್ಜಿಯವರ ವಸತಿ ಶಾಲೆ ಎಂದು ಪ್ರತಿಯೊಂದು ಜಿಲ್ಲೆಯಲ್ಲೂ ಇವತ್ತಿನ ದಿವಸ ನಾವು ತೆಗೆಯುವುದರಿಂದ, ಮುಂದೆಯೂ ಎಲ್ಲರೂ ಅವರನ್ನು ನಿರಂತರವಾಗಿ ನೆನಪಿಸಿಕೊಳ್ಳುವ ಒಂದು ದೊಡ್ಡ ಅವಕಾಶವನ್ನು ನಮ್ಮ ಸರ್ಕಾರ ಮಾಡಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪರಿಶಿಷ್ಟಜಾತಿಯವರಿಗೆ ಎಲ್ಲಿಯವರೆಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದೆ ಬರುವುದಿಲ್ಲವೋ ಅಲ್ಲಿಯವರೆಗೆ ಈ ಮೀಸಲಾತಿ ಮುಂದುವರೆಯಬೇಕು ಎನ್ನುವ ಮಾತನ್ನು ಹೇಳಿದರು. ಇದು ದೊಡ್ಡ ಮಾತು. ಇಂತಹ ಮಹನೀಯರು ಇವತ್ತಿನದಿವಸ ಕಣ್ಮರೆಯಾಗಿದ್ದಾರೆ, ಆದ್ದರಿಂದ ಇಡೀ ನಮ್ಮ ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ. ಇವತ್ತು ಸಭಾನಾಯಕರು ಏನು ಸಂತಾಪಸೂಚಕ ನಿರ್ಣಯವನ್ನು ಮಂಡಿಸಿದ್ದಾರೆ ಅದನ್ನು ನಾನು ಅನುಮೋದಸುತ್ತಾ, ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಸದನದ ನಾಯಕರು ಸೂಚಿಸಿದಂತಹ ಸಂತಾಪ ಗೊತ್ತುವಳಿ ಇಡೀ ಸದನದ ಮನಸ್ಸಿನ ಸಾಕ್ಷಿಯಾಗಿದೆ. ಪ್ರಾಯಶಃ ದೊಡ್ಡ ವಿಶ್ವಾರ್ಹತೆಯನ್ನು ಮತ್ತು ಅಂತಹ ಪ್ರಖ್ಯಾತಿಯನ್ನು ಪಡೆಯಬೇಕಾಗಿದ್ದರೆ ಅದಕ್ಕೆ ಬಹಳ ವರ್ಷಗಳ ಸಾಧನೆ, ನಿಷ್ಠುರತೆ, ಶ್ರದ್ಧೆ ಮತ್ತು ನಂಬಿದ ನಂಬಿಕೆಗಳಿಗಾಗಿ ಮಾಡುವ ಒಂದು ಛಲ ಈ ಗುಣಗಳು ಅತ್ಯಂತ ಅವಶ್ಯಕವೆಂದು ಭಾವಿಸಿದ್ದೇನೆ. ಆ ದೃಷ್ಟಿಯಿಂದ ಎಂಟನೂರು ವರ್ಷಗಳ ಹಿಂದೆ ಬಸವಣ್ಣನವರಿಗೆ ಪ್ರಾಯಶಃ ಇಂತಹದೆ ಒಂದು ಸಂದರ್ಭ ಎದುರಾಗಿರಬಹುದು. ಅವರ ಒಂದು ವಚನದಲ್ಲಿ ಹೇಳುತ್ತಾರೆ, ನ್ಯಾಯ ನಿಷ್ಠೂರ, ದಾಕ್ಷಿಣ್ಯ ಪರನಾನಲ್ಲ ಎನ್ನತಕ್ಕಂತಹ ಮಾತನ್ನು ಬಳಸುತ್ತಾರೆ. ಅವರು ಎಷ್ಟು ನ್ಯಾಯ ನಿಷ್ಠೂರಿಗಳಾಗಿದ್ದರೆಂದರೆ, ಅವರು ಪ್ರಧಾನಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಶ್ರೀಮಾನ್ ಅಟಲ್‌ಬಿಹಾರಿ ವಾಜಪೇಯಿಯವರು ವಿದೇಶಾಂಗ ಮಂತ್ರಿಗಳಾಗಿದ್ದಾಗ ನಮ್ಮ ಬಾಂಧವ್ಯ ಮಧ್ಯಪ್ರಾಚ್ಯ ದೇಶಗಳ ಜೊತೆಗೆ ಬಹಳ ಸುಗಮವಾಗಿದ್ದಂತಹ ಸಂದರ್ಭದಲ್ಲಿ ಅಂದಿನ ಇಸ್ರೇಲಿನ ರಕ್ಷಣಾಮಂತ್ರಿ ಮೊಷಿದ್ ಡಯಾನ್‌ರವರು ಭಾರತ ದೇಶಕ್ಕೆ ಬಂದು ಪ್ರಧಾನ ಮಂತ್ರಿಗಳನ್ನು ಮತ್ತು ವಿದೇಶಾಂಗ ಮಂತ್ರಿಗಳನ್ನು ರಹಸ್ಯವಾಗಿ ಕಂಡು ಹೊಗುತ್ತಾರೆ. ಅದು ಎಷ್ಟೋ ದಿವಸಗಳ ನಂತರ ಆ ವರದಿ ಹೊರಗಡೆಗೆ ಬಿದ್ದಾಗ ನಮ್ಮ ಪತ್ರಕರ್ತರು ಅಟಲ್‌ಬಿಹಾರಿ ವಾಜೇಯಿಯವರನ್ನು ಈ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಆಗ ದೇಶ ಹಿತದೃಷ್ಟಿಯಿಂದ ಅಟಲ್‌ಬಿಹಾರಿ ವಾಜಪೇಯಿರವರು ಇಲ್ಲ ಅಂತಹ ರಹಸ್ಯ ಮಾತುಕತೆಗಳು ಏನು ಆಗಿರಲಿಲ್ಲ. ಅವರು ನಮ್ಮಲ್ಲಿಗೆ ಬಂದಿರಲಿಲ್ಲ ಎನ್ನತಕ್ಕಂತಹ ಮಾತನ್ನು ಹೇಳುತ್ತಾರೆ. ಆ ಹೇಳಿಕೆ ದೆಹಲಿಯಲ್ಲಿ ಆಗುವಾಗ ಮುಂಬಾಯಿಯ ಪತ್ರಕರ್ತರು ಮುರಾರ್ಜಿ ದೇಸಾಯಿರವರನ್ನು ಕೇಳಿದರೆ, ಹೌದು ಬಂದಿದ್ದರು ನಮ್ಮೊಡನೆ ರಹಸ್ಯ ಮಾತುಕತೆಗಳಾದವು, ಆದರೆ ನಾವು ಅವರ ಮಾತನ್ನು ಒಪ್ಪಲಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಾರೆ. ಸತ್ಯದ ಅನೇಕ ಆಯಾಮಗಳನ್ನು ನೋಡುವಾಗ ಒಂದು ಕಡೆ ಅಟಲ್‌ಬಿಹಾರಿ ವಾಜಪೇಯಿರವರು ಸುಳ್ಳುಗಾರರು ಎನ್ನುವ ಮಾತಲ್ಲ. ಒಬ್ಬ ಅತ್ಯಂತ ಹಿರಿಯ ಮಟ್ಟಕ್ಕೆ ಹೋಗಿದ್ದಂತ, ವಿಶ್ವಾಸಾರ್ಹತೆಯನ್ನು ಗಳಿಸಿಕೊಳ್ಳುವಂತಹ ವ್ಯಕ್ತಿತ್ವ ಮೂಡಿಸಿಕೊಂಡಿರುವ ವ್ಯಕ್ತಿ ಆತ ತನ್ನ ರಾಷ್ಟ್ರದ ಗಡಿಗಳನ್ನು, ಅಂಚನ್ನು ಮೀರಿ ನಿಲ್ಲುವಂತಹ ಒಬ್ಬ ವ್ಯಕ್ತಿಯಾಗಿ ಪರಿವರ್ತಸಿಕೊಳ್ಳುತ್ತಾರೆ. ಮತ್ತೆ ದ್ವಿರಾಷ್ಟ್ರ ಪದ್ಧತಿಗೆ ಕಾರ್ಯಕಾರಿ ಸಮಿತಿಯಲ್ಲಿ ಆಗ ಹೋರಾಟ ಮಾಡಿ ಪಾಕಿಸ್ತಾನ ಎನ್ನುವಂತಹದ್ದು ಆಗಬಾರದು ಎನ್ನುವಂತಹ ಪ್ರತಿಪಾದಕರ ಗುಂಪಿನಲ್ಲಿ ಮುಂಚೂಣಿಯಲ್ಲಿದ್ದಂತಹ ಮುರಾರ್ಜಿಯ ದೇಸಾಯಿಯವರ ಮನಸ್ಥಿತಿ ಮತ್ತು ವಿಶ್ವಾಸಾರ್ಹತೆಯನ್ನು ಅಂತರಾಷ್ಟ್ರೀಯ ಖ್ಯಾತಿಯನ್ನು ಕಂಡುಹಿಡಿದೇ ಪಾಕಿಸ್ತಾನ ತನ್ನ ಅತ್ಯಂತ ಗೌರವವಾಗಿರುವಂತಹ ಒಂದು ಗೌರವ ಪದವಿಯನ್ನು ಅವರಿಗೆ ಕೊಡುತ್ತದೆ. ಅಂದರೆ ಒಬ್ಬ ವ್ಯಕ್ತಿ ಇಂತಹ ವಿಶ್ವಾಸಾರ್ಹತೆಯನ್ನು ಬೆಳೆಸಿಕೊಳ್ಳುವಂತಹದ್ದು, ಬಹಳ ಖಚಿತವಾಗಿರತಕ್ಕಂತಹದ್ದು. ಅಂತಹ ಮಟ್ಟವನ್ನು ಬೆಳೆಸಿಕೊಂಡಿರತಕ್ಕಂತಹವರಲ್ಲಿ

ಕೆಲವೇ ಕೆಲವು ಜನಗಳಲ್ಲಿ ಮುರಾರ್ಜಿ ದೇಸಾಯಿಯವರು ಒಬ್ಬರಾಗಿರುತ್ತಾರೆ. ಅವರ ಹತಮಾರಿತನದ ಬಗ್ಗೆ ಈ ಎಲ್ಲಾ ವಿಚಾರಗಳನ್ನು ಹೇಳಿದರು ಕೂಡ ಅವರ ವೈರುದ್ಯಗಳನ್ನು ಕೂಡ ನಾವು ಗುರುತಿಸಬೇಕಾಗುತ್ತಾದೆ. ನಮ್ಮ ಸದನದ ನಾಯಕರು ಹೇಳಿದಂತೆ ಕೇವಲ ಒಬ್ಬರೇ ಒಬ್ಬರು ಎನ್ನುವಂತಹ ಮಾತು ಇದ್ದರು ಕೂಡ ಅವರು ಒಂದು ಕಡೆ ಪ್ರಥಮಬಾರಿಗೆ ನಮ್ಮ ರಸ್ತೆಸಾರಿಗೆ ಸಂಸ್ಥೆಗಳ ರಾಷ್ಟ್ರೀಕರಣ ಮಾಡಿದಂತ ಹೆಗ್ಗಳಿಕೆಯನ್ನು ಪಡೆದಿರತಕ್ಕಂತಹವರು. ಆದರೆ ಅದೇ ರೀತಿಯಾಗಿ ಒಂದು ಖಾಸಗಿ ಉದಾರ ಆರ್ಥಿಕ ನೀತಿಗಳ ಕುರಿತಾಗಿ, ಬ್ಯಾಂಕ್ ರಾಷ್ಟ್ರೀಕರಣದಲ್ಲಿ ವಿರುದ್ಧವಾಗಿರತಕ್ಕಂತಹ ನಿಲುವನ್ನು ತೆಗೆದುಕೊಂಡಿರತಕ್ಕಂತಹವರು. ಹೀಗೆ ಜನಗಳ ಓಟಿಗಾಗಿಯೇ ಬದುಕತಕ್ಕಂತಹದ್ದಲ್ಲ. ತಾವು ನಂಬಿದ ನಂಬಿಕೆಗಳಿಗಾಗಿ ಎನ್ನುವುದನ್ನು ತೋರಿಸಿಕೊಟ್ಟಿರುವ ಅತ್ಯಂತ ಒಬ್ಬ ಹಿರಿಯ ಮುತ್ಸದ್ದಿ ರಾಜಕಾರಣಿ ಮುರಾರ್ಜಿದೇಸಾಯಿಯವರು ಆಗಿರುವುದರಿಂದ, ನಾವು ಕೆಲವು ಮಾತುಗಳಲ್ಲಿ ಹೇಳುವಂತೆ, ಈ ದೇಶ ಅವರನ್ನು ಕಳೆದುಕೊಂಡು ತುಂಬಲಾರದ ನಷ್ಟವಾಗಿದೆ. ಇಂತಹ ಮಾತುಗಳು ಕೂಡ ಒಂದೊಂದು ಸಲ ಸವಕಲುನಾಣ್ಯಗಳೇನೊ ಎನ್ನುವ ರೀತಿಯಲ್ಲಾಗುತ್ತದೆ. ಒಂದು ಅರ್ಥದಲ್ಲಿ ಒಬ್ಬ ನಿಷ್ಠೂರವಾದಂತಹ ನಂಬಿದ ನಂಬಿಕೆಗಳಿಗಾಗಿ ಹೋರಾಡಿದಂತಹ ಛಲವಂತನನ್ನು ನಾವು ಕಳೆದುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿ ಸದನದ ನಾಯಕರು ಸೂಚಿಸಿರುವಂತೆ ಈ ಗೊತ್ತುವಳಿ ನಮ್ಮೆಲ್ಲರ ಅಂತರ್‌ಸಾಕ್ಷಿಯ ಪ್ರತಿರೂಪವೆಂದು ಹೇಳಿ ನಾನು ಅವರ ಜೊತೆಗೆ ಸೇರಿ ಸಂತಾಪ ಸೂಚಿಸುತ್ತಾ ನಮ್ಮ ಅಧ್ಯಕ್ಷರು ನನಗೆ ಕೂಟ್ಟ ಅವಶಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮುರಾರ್ಜಿದೇಸಾಯಿರವರು ಈ ದೇಶ ಕಂಡಂತಹ ಅಪರೂಪ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದರು. ಬಹಳ ನಿಷ್ಠೂರವಾದಿ, ಗಾಂಧಿವಾದಿಯಾಗಿ ತಮ್ಮ ಬದುಕಿನ ಉದ್ದಕ್ಕೂ ಕೂಡ ಅವರು ನಂಬಿದಂತಹ ವಿಚಾರಗಳು ಮತ್ತು ಮೌಲ್ಯಗಳಲ್ಲಿ ಯಾವತ್ತು ಕೂಡ ರಾಜಿ ಮಾಡಿಕೊಂಡವರಲ್ಲ. ಬಹುಶಃ ನಾವು ಇತ್ತೀಚಿನ ದಿನಗಳಲ್ಲಿ ಸ್ವಾರ್ಥಕ್ಕಾಗಿ ಅಧಿಕಾರಕ್ಕಾಗಿ ಇಂತಹ ವಿಚಾರಗಳಲ್ಲಿ ರಾಜಿ ಮಾಡಿಕೊಳ್ಳುವಂತಹ ಪ್ರವೃತ್ತಿಯನ್ನು ಹೆಚ್ಚಾಗಿ ನೋಡುತ್ತಿದ್ದೇವೆ. ಅವರು ರಾಜಕೀಯದಲ್ಲಿ ಅನೇಕ ಏರಿಳಿತಗಳನ್ನು ಕಂಡಿದ್ದರು ಕೂಡ ಎಂತಹ ಕಠಿಣ ಪರಿಸ್ಥಿತಿಯಲ್ಲೂ ಕೂಡ ಅವರು ಯಾವತ್ತು ದೇಸಾಯಿಯವರ ಮೂಲಭೂತ ಮೌಲ್ಯಗಳಲ್ಲಿ ರಾಜಿ ಮಾಡಿಕೊಳ್ಳುವಂಥ ಕೆಲಸವನ್ನು ಮಾಡಲಿಲ್ಲ.

7 ಪಿ.ಎಂ.

ಅವರು ಪ್ರಧಾನಿಯಾಗಿದ್ದಾಗ ಸಾಮಾಜಿಕ ನ್ಯಾಯಕ್ಕೆ ಮತ್ತೆ ಚಾಲನೆ ಸಿಕ್ಕಿತು. 1955-56ರಲ್ಲಿ ಕಾಕಾ ಕಾಲೇಲ್‌ಕರ್ ಅವರ ವರದಿ ತಿರಸ್ಕಾರವಾದ ಮೇಲೆ ಈ ದೇಶದಲ್ಲಿ, ಮತ್ತೆ 25 ವರ್ಷಗಳ ಕಾಲ ಈ ದೇಶದ ಹಿಂದುಳಿದ ವರ್ಗದ ಜನರಿಗೆ ಇಂಥ ಒಂದು ಆಯೋಗವನ್ನು ರಚನೆಮಾಡಿ ಅವರ ಒಳಿತಿಗಾಗಿ, ಅವರ

ಸಾಮಾಜಿಕ, ಆರ್ಥಿಕ ಬೆಳವಣಿಗೆಗೆ ಸವಲತ್ತುಗಳನ್ನು ಕೊಡಬೇಕೆಂಬ ಪ್ರಯತ್ನವೇ ನಡೆಯಲಿಲ್ಲ. ಶ್ರೀ ಮೊರಾರ್ಜಿಯವರು ಪ್ರಧಾನಿ ಆದಮೇಲೆ ಮತ್ತೆ ಇಂಥ ಒಂದು ಸಾಮಾಜಿಕ ನ್ಯಾಯವನ್ನು ಹಿಂದುಳಿದ ಜಾತಿಯವರಿಗೆ ಕೊಡಬೇಕೆಂದು ಮಂಡಲದವರ ಅಧ್ಯಕ್ಷತೆಯಲ್ಲಿ ಒಂದು ಆಯೋಗ ರಚನೆಯಾಯಿತು. 25 ವರ್ಷಗಳ ಕಾಲ ಈ ದೇಶದಲ್ಲಿ ಅದರ ಬಗ್ಗೆ ಚಿಂತನೆ ಒತ್ತಾಯ ಇಲ್ಲದೆ ಇದ್ದ ದೇಶದಲ್ಲಿ ಮೊರಾರ್ಜಿಯವರು ಇದಕ್ಕೆ ಚಾಲನೆ ಕೊಟ್ಟರು ಎಂಬುದನ್ನು ಹಿಂದುಳಿದ ವರ್ಗದ ಜನರು ಮರೆಯುವಂತಿಲ್ಲ ಎನ್ನುವ ಮಾತನ್ನು ಇವತ್ತು ಸ್ಮರಿಸಿಕೊಳ್ಳಬೇಕಾಗುತ್ತದೆ. ಆದುದರಿಂದ ಸತ್ಯಕ್ಕಾಗಿ, ನೀತಿಗಾಗಿ ಹೋರಾಟ ಮಾಡಿದಂತ ಅದನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಮತ್ತು ಕೊನೆಯ ಉಸಿರು ಇರುವವರೆಗೆ ಚರಕದಲ್ಲಿ ನೂಲನ್ನು ತೆಗೆಯುವಂತಹ ಗಾಂಧಿ ತತ್ವದಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟುಕೊಂಡಿದ್ದ ಬಹುಶಃ ಒಬ್ಬ ಅತ್ಯಂತ ಎತ್ತರ ಮಟ್ಟದಲ್ಲಿದ್ದ ರಾಜಕಾರಣಿಯನ್ನು ಒಂದು ಹೊಸ ಪರಂಪರೆಯನ್ನು ಈ ದೇಶಕ್ಕೆ ಹಾಕಿಕೊಟ್ಟಿರತಕ್ಕ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಆ ಕಾರಣದಿಂದ ಮೌಲ್ಯಗಳು ಕುಸಿಯತಕ್ಕ ಪರಿಸ್ಥಿತಿಯಲ್ಲಿ ನಾವು ಇರುವಾಗ ಅವರು ಹಾಕಿಕೊಟ್ಟ ಆದರ್ಶಗಳು ಮೌಲ್ಯಗಳು ಅತ್ಯಂತ ಅವಶ್ಯಕ ಈ ಸಮಾಜಕ್ಕೆ ಈ ದೇಶಕ್ಕೆ ಎಂಬ ಮಾತನ್ನು ಹೇಳಿ ಈ ಹಿನ್ನೆಲೆಯಲ್ಲಿ ಈ ದೇಶ ಒಬ್ಬ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಿದೆ. ಇವತ್ತು ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಅವರ ಕುಟುಂಬ ಅಥವಾ ಯಾವುದೋ ಒಂದು ವರ್ಗ ಅವರನ್ನು ಕಳೆದುಕೊಂಡಿರತಕ್ಕದ್ದು ಅಲ್ಲ. ಇಡೀ ರಾಷ್ಟ್ರ ಒಬ್ಬ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಿದೆ. ಆದುದರಿಂದ ಅವರ ಆತ್ಮಕ್ಕೆ ಅವರ ಕುಟುಂಬದವರಿಗೆ ಶಾಂತಿ ದೊರಕಲಿ ಎಂಬ ಮಾತನ್ನು ಹೇಳಿ, ಆ ದಿಕ್ಕಿನಲ್ಲಿ ಪ್ರಾರ್ಥನೆ ಮಾಡಿ ನನಗೆ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಪ್ರಮಿಳಾ ನೇಸರ್ಗಿ(ಚಾಮರಾಜ ಪೇಟೆ) : ಮಾನ್ಯ ಅಧ್ಯಕ್ಷರೆ, ಜಾತಸ್ಯ ಮರಣಂ ಧ್ರುವಂ : ಹುಟ್ಟಿದವರು ಯಾರಾದರೂ ಸಾಯಲೇಬೇಕು. ಅದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಈ ಪ್ರಪಂಚದಲ್ಲಿ ಹಲವಾರು ಮಂದಿ ಬದುಕುತ್ತಾರೆ ಸಾಯುತ್ತಾರೆ. ಭೂಮಿಗೆ ಭಾರವಾಗಿ ಹೊಟ್ಟೆಗೆ ದಂಡವಾಗಿ ಇರತಕ್ಕ ಜನರನ್ನು ಕಾಣುತ್ತೇವೆ. ಆದರೆ ಮನುಷ್ಯ ಮಾಡಿರತಕ್ಕಂಥ ಕೃತ್ಯಗಳಿಂದ ಜನ ಅವರನ್ನು ನೆನೆಯುತ್ತಾರೆ. ಅಂತಹವರಲ್ಲಿ ಶ್ರೀ ಮೊರಾರ್ಜಿಯವರು ಕೂಡ ಒಬ್ಬರು. ಅಂಥ ಒಬ್ಬ ದೊಡ್ಡ ಮನುಷ್ಯರು-ಪ್ರಧಾನಿಯಾಗಿ ಈ ದೇಶಕ್ಕೆ ಅದರಲ್ಲೂ ಹೆಣ್ಣು ಮಕ್ಕಳಿಗೆ ಒಳ್ಳೆಯ ಮಾರ್ಗದರ್ಶಕರಾಗಿದ್ದವರು. ಪಾನನಿರೋಧವನ್ನು ಗುಜರಾತಿನಲ್ಲಿ ಜಾರಿಗೆ ತಂದು ಎಲ್ಲರಿಗೂ ಮಾರ್ಗಕರ್ಶಕರಾದರು. ಈ ದೆಶದಲ್ಲಿ ಕ್ಯೆಮ್ಸ್ ಏನು ಇವೆ, ಏನು ಹೆಚ್ಚಾಗಿವೆ ಅವನ್ನೆಲ್ಲ ತೆಗೆಯಬೇಕಾದರೆ ಬಹಳಷ್ಟು ಶ್ರಮಿಸಿದರು. ವ್ಯಸನಕ್ಕೆ ಕಾರಣ ಪಾನನಿರೋಧವೆಂದು ಅದರಲ್ಲಿ ಅಚಲವಾದ ಭಕ್ತಿ ಶಕ್ತಿ ಇಟ್ಟಿದ್ದವರು ಮೊರಾರ್ಜಿಯವರು. ಇವತ್ತಿನ ದಿವಸ ನಾವು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ. ಶ್ರದ್ಧಾಂಜಲಿ ಬಗ್ಗೆ ಮಾತನಾಡುತ್ತಿದ್ದೇವೆ. ಅವರ ನೆನಪಿನಲ್ಲಿ

ವಸತಿ ಶಾಲೆಗಳನ್ನು ತೆಗೆಯುತ್ತಿದ್ದೇವೆಂದು ಅಧಿಕಾರದಲ್ಲಿರತಕ್ಕ ಜನತಾ ದಳದವರು, ಮಾನ್ಯ ನಾಯಕರು ಮತ್ತು ಎಲ್ಲರೂ ಕೂಡ ಮಾತನಾಡುತ್ತಿದ್ದಾರೆ. ನಾನಾದರೂ ಹೇಳುವುದಿಷ್ಟೆ, ನಾವು ಮಾಡುವುದು ಕೃತಿಯಲ್ಲಿ ಆಗಬೇಕು. ನಾವು ಮಾಡತಕ್ಕ ಕೆಲಸ ಕೇವಲ ಕಡತದಲ್ಲಿ ಆಗಬಾರದು. ನಾವು ನಿಜವಾಗಿಯೂ ಮೊರಾರ್ಜಿಯವರಿಗೆ ಶ್ರದ್ಧಾಂಜಲಿ ಅರ್ಪಿಸಬೇಕೆಂದು ನಮ್ಮ ಮನಸ್ಸಿನಲ್ಲಿ ಇರುವುದಾದರೆ ನಮ್ಮ ಕರ್ನಾಟಕದಲ್ಲಿರತಕ್ಕ ಪಾನ ನಿರೋಧ ಶಾಸನವನ್ನು ತಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸೋಣ. ಅದು ನಿಮಗೆ ಸಾಧ್ಯವಾಗದೆ ಹೋದರೆ ಶಾಸಕರಾಗಿರತಕ್ಕ ನಾವು ಕರ್ನಾಟಕದಲ್ಲಿ ಏನು 224 ಮಂದಿ ಇದ್ದೇವೆ ನಾವು ಇನ್ನು ಮೇಲೆ ಪಾನ ಸ್ವೀಕಾರ ಮಾಡುವುದಿಲ್ಲವೆಂದು ಅಂಥ ಶ್ರದ್ಧಾಂಜಲಿಯನ್ನು ಅರ್ಪಿಸೋಣವೆಂದು ಹೇಳಿ ನಾನು ಈ ಸಂದರ್ಭದಲ್ಲಿ ನನಗೆ ಮಾತನಾಡವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕೆ ತಮ್ಮನ್ನು ಅಭಿನಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರು ತಂದ ಸಂತಾಪ ಸೂಚಕ ನಿರ್ಣಯಕ್ಕೆ ಬೆಂಬಲ ನೀಡಿ ಇಂದು ನಮ್ಮನ್ನು ಅಗಲಿರುವುದರಿಂದ ಅಗಲಿರತಕ್ಕ ಮಾಜಿ ಪ್ರಧಾನಿ ಗಾಂಧಿವಾದಿಗಳು ಅದ ಮಹಾಪುರುಷರು ಇವತ್ತು ನಮ್ಮನ್ನು ಅಗಲಿರುವುದರಿಂದ ನಮಗೆಲ್ಲರಿಗೆ ದುಃಖ ಉಂಟಾಗಿದೆ. ಇವತ್ತು ಅವರ ಬಗ್ಗೆ ನಾನು ಕೂಡ ವಿಶೇಷವಾಗಿ ಅಭಿಮಾನದ ಎರಡು ಮಾತುಗಳನ್ನು ಹೇಳುವುದಾದರೆ ನಾನು ಕೂಡ ಬಾಂಬೆ ಕರ್ನಾಟಕದ ಒಂದು ಜಿಲ್ಲೆಯಿಂದ ಬಂದಿರತಕ್ಕ ವ್ಯಕ್ತಿ. ಅವರು ಬಾಂಬೆ ಪ್ರಾಂತ್ಯದ ಮುಖ್ಯ ಮಂತ್ರಿಗಳಾದಂಥ ಸಂದರ್ಭದಲ್ಲಿ ಬಹುಶಃ ನಮ್ಮ ಜಿಲ್ಲೆಗೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಶಿಸ್ತು ಮತ್ತು ವೇಳೆಗೆ ಎಷ್ಟು ಮಹತ್ವ ಕೊಡುತ್ತಿದ್ದರು ಎಂಬುದೇ ನನ್ನ ಕಣ್ಣೆದುರಿಗೆ ನಡೆದಿರತಕ್ಕ ಒಂದು ಘಟನೆ. ಇನ್ನೂ ಜೀವಂತವಾಗಿ ಉಳಿದಿದೆ. ಒಂದು ಸಂದರ್ಭದಲ್ಲಿ ಅವರು ನಮ್ಮ ಭಾಗಲಕೋಟೆಗೆ ಬಂದಾಗ ನಾನು ವಿದ್ಯಾರ್ಥಿಯಾಗಿದ್ದೆ; ಅಲ್ಲಿ ಅವರ ಕಾರ್ಯಕ್ರಮ ಮುಂಜಾನೆ 8 ಗಂಟೆಗೆ ಇತ್ತು. ಬಹುಶಃ ಆ ಕಾರ್ಯಕ್ರಮವನ್ನು ನಿಸೋಜಿಸಿದ್ದವರೆಲ್ಲರೂ ಕೂಡ 8 ಗಂಟೆಗೆ ಬಂದಿರಲಿಲ್ಲ. ಮೊರಾರ್ಜಿಯವರು ಆ ಕಾರ್ಯಕ್ರಮಕ್ಕೆ 8 ಗಂಟೆಗೆ ಬಂದಾಗ ಜನರು ಇರಲಿಲ್ಲ ಮತ್ತು ಯಾರು ನಿಯೋಜನೆ ಮಾಡಿರತಕ್ಕ ಹಿರಿಯರು ಇರಲಿಲ್ಲ ಆ ಸಂದರ್ಭದಲ್ಲಿ ನಾವು 8-10 ಜನ ವಿದ್ಯಾರ್ಥಿಗಳು ಅಷ್ಟೇ ಇದ್ದೆವು. ಅವರು ಕಾರ್ಯಕ್ರಮಕ್ಕೆ ವೇಳೆಗೆ ಸರಿಯಾಗಿ ಬಂದು ನಿಂತು ನಮ್ಮ ಕುಶಲೋಪರಿ ವಿಚಾರಿಸಿ ಕೇವಲ 8-10 ಜನರಿಗೆ ಮಾತನಾಡಿ ಹೋಗಿಬಿಟ್ಟರು. ಆಮೇಲೆ ಕಾರ್ಯಕ್ರಮ ನಿಯೋಜನೆ ಮಾಡಿರತಕ್ಕ ಎಲ್ಲ ಹಿರಿಯರು ಬಂದು ವಿಚಾರಿಸುವ ವೇಳೆಗೆ ಅವರು ಕಾರ್ಯಕ್ರಮ ಮುಗಿಸಿ ಹೋಗಿಬಿಟ್ಟಿದ್ದರು. ಅಂದರೆ ಅವರು ವೇಳೆಗೆ ಎಷ್ಟೊಂದು ಮಹತ್ವ ಕೊಡುತ್ತಿದ್ದರು ಎಂಬುದಕ್ಕೆ ಉದಾಹರಣೆ ಹೇಳಿದೆ. ಇನ್ನೊಂದು ಸಾರಿ ನಮ್ಮ ತಾಲ್ಲೂಕಿಗೆ ಮುಖ್ಯಮಂತ್ರಿಯಾಗಿ ಯಾವುದೋ ಒಂದು ಕಾರ್ಯಕ್ರಮಕ್ಕೆ ಬಂದಾಗ ಅನೇಕ ಜನ ಬಂದಿದ್ದರು. ಕೆರೂರು ಎಂಬ ಪಟ್ಟಣ; ಆ ಪಟ್ಟಣಕ್ಕೆ ಕಾರ್ಯಕ್ರಮಕ್ಕೆ

ಬಂದಾಗ ಜನರು ಬಹಳ ದೊಡ್ಡ ಗಲಾಟೆ ಮಾಡಿದರು. ಗಲಾಟೆ ಮಾಡಿದ ಸಂದರ್ಭದಲ್ಲಿ ಮೊರಾರ್ಜಿಯವರು ಗಲಾಟೆ ಮಾಡಿದವರಿಗೆ ಏನೂ ಹೇಳಲಿಲ್ಲ. ಅವರು ಪೋಲೀಸ್ ಅಧಿಕಾರಿಗಳಿಗೆ ಏನು ಹೇಳಿದರು ಎಂದರೆ ಯಾರು ಗಲಾಟೆ ಮಾಡಿದ್ದಾರೆ ಅವರಿಗೆ ಪುಂಡುಗಂದಾಯ ಹಾಕಿ ಎಂದರು. ಯಾವಾಗ ಪುಂಡುಗಂದಾಯ ಹಾಕಿ ಶಿಕ್ಷೆ ಅನುಭವಿಸಿದರು ಮತ್ತೆ 20 ವರ್ಷಗಳ ಕಾಲ ಎಲ್ಲಿಯೂ ಕೂಡ ಅಹಿತಕರ ಘಟನೆ ಮಾಡಲಿಲ್ಲ. ಅಂಥ ಒಂದು ಪೊಲೀಸ್ ಇಲಾಖೆ ಕಾನೂನು ಮತ್ತು ಶಾಂತಿ ಪಾಲನೆ ವಿಚಾರದಲ್ಲಾಗಲಿ ಅನೇಕ ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಾಗಲಿ ಬಹಳ ಚುರುಕಾಗಿ ನಮ್ಮ ಜಿಲ್ಲೆಯ ಜನರ ಸೇವೆ ಮಾಡಿರತಕ್ಕವರನ್ನು ಇವತ್ತಿನ ದಿವಸ ನಾವು ಕಳೆದು ಕೊಂಡಿದ್ದೇವೆ. ಅವರ ಆತ್ಮಕ್ಕೆ ಚಿರಶಾಂತಿ ಕೋರಿ ತಾವು ಎರಡು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ತಮಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೆ, ಈ ಶತಮಾನದ ಅತ್ಯಂತ ಶ್ರೇಷ್ಠ ರಾಜಕಾರಣಿ ಶ್ರೀ ಮೊರಾರ್ಜಿ ಅವರ ಬಗ್ಗೆ ಬೆಳಿಗ್ಗೆ ಪತ್ರಿಕೆ ಓದಿದಾಗ ಅವರ ಸ್ಥಿತಿ ಚಿಂತಾಜನಕವಾಗಿದೆ ಅಂದಾಗ ಸಾಯಂಕಾಲದೊಳಗೆ ಏನಾಗುತ್ತದೆಯೋ ಏನೋ ಅಂದುಕೊಂಡೇ ಸಭೆಗೆ ಬರಬೇಕಾಯಿತು. ವಿಧಿ ಹತ್ತು ತಿಂಗಳ ಕಾಲ ಅವರನ್ನು ಇಟ್ಟಿದ್ದರೆ ಸಂಪೂರ್ಣ 100 ವರ್ಷಗಳನ್ನು ಅವರು ದಾಟುತ್ತಿದ್ದರು. ಆದರೆ ಬಹಳ ವಿಚಿತ್ರವಾದ ವಿಧಿಲಿಖಿತ. ಅವರ ಶತಮಾನೋತ್ಸವಕ್ಕೆ ಇನ್ನು ಕೇವಲ ಹತ್ತು ತಿಂಗಳು ಮಾತ್ರ ಉಳಿದಿತ್ತು ಎಂಬುದನ್ನು ಜ್ಞಾಪಿಸಬೇಕಾಗಿದೆ. ಶ್ರೀ ಮೊರಾರ್ಜಿ ಅವರನ್ನು ಅನೇಕ ಜನರು ಕಂಡ ಹಾಗೆ ನಾನೂ ಕೂಡ ಬಹಳ ಹತ್ತಿರದಿಂದ ಅವರನ್ನು ಕಂಡಿದ್ದೇನೆ. ಅವರು ನಿಷ್ಠೂರವಾದಿ ಗಾಂಧಿವಾದಿ ಎಂದು ಹೇಳುವುದರ ಜೊತೆಗೆ ಖಾದಿವಾದಿ ಎಂದು ಸ್ಪಷ್ಟಪಡಿಸುತ್ತಿದ್ದೇನೆ. ಬಹಳ ಜನರಿಗೆ ತಿಳಿದಿದೆ. ಅವರ ಹಸ್ತಾಕ್ಷರಗಳನ್ನು ಕೇಳುವುದಕ್ಕೆ ಹೋದಾಗ ಅವರು ಮೊದಲು ಬಟ್ಟೆ ಎಂಥದ್ದು ಧರಿಸಿದ್ದಾರೆಂದು ನೋಡುತ್ತಿದ್ದರು. ಖಾದಿ ಧರಿಸಿದ್ದವರಿಗೆ ಮಾತ್ರ ಹಸ್ತಾಕ್ಷರ ಕೊಡುತ್ತಿದ್ದರು ಎಂಬುದು ಬಹಳ ಜನರ ಅನುಭವಕ್ಕೆ ಬಂದಿದೆ. ಖಾದಿ ಧರಿಸದವರಿಗೆ ಹಸ್ತಾಕ್ಷರ ಕೊಡುತ್ತಿರಲಿಲ್ಲ ಮೊರಾರ್ಜಿಯವರು. ನಾನು ಅನೇಕ ಸಾರಿ ಪಣ್ಣುಮಕ್ಕಳನ್ನು ಕರೆದುಕೊಂಡು ಹೋದಾಗ ಅವರಿಗೆಲ್ಲ ಹೇಳುತ್ತಿದರು ನಾಳೆ ದಿವಸ ನೀವೆಲ್ಲ ಖಾದಿ ಧರಿಸಿಕೊಂಡು ಬನ್ನಿ ನಾನು ಹಸ್ತಾಕ್ಷರ ಕೊಡುತ್ತೇನೆಂದು ಹೇಳುತ್ತಿದ್ದರು. ಶ್ರೀ ಮೊರಾರ್ಜಿಯವರು ಇದನ್ನು ಕೊನೆಯವರೆಗೆ ಉಳಿಸಿಕೊಂಡು ಬಂದರು ಎಂಬುದನ್ನು ನಾನು ಹತ್ತಿರದಿಂದ ಕಂಡಿದ್ದೇನೆ. ನನ್ನ ಜೀವನದಲ್ಲಿ ಬಹಳ ಹತ್ತಿರವಾಗಿ ಕಂಡದ್ದು ಎಂದರೆ ಕೇಂದ್ರದಲ್ಲಿ ಅವರು ಅರ್ಥಮಂತ್ರಿಗಳಾಗಿದ್ದರು. ಅಂದಿನ ರಾಜ್ಯ ಸರ್ಕಾರ ಚಿಕ್ಕ ಉಳಿತಾಯ ಕೇಂದ್ರ ಸಮಿತಿಗೆ ನನ್ನನ್ನು ಸದಸ್ಯಣಿಯನ್ನಾಗಿ ಮಾಡಿದಾಗ ನಾನು ಕರ್ನಾಟಕದಲ್ಲಿ ಚಿಕ್ಕ ಉಳಿತಾಯದ ಒಂದು ಕೆಲಸ ಮಾಡಿದಕ್ಕಾಗಿ ನಾನು ಪ್ರಥಮ ಬಹುಮಾನವನ್ನು ಅವರ ಕೈಯಿಂದ ಸ್ವೀಕಾರ ಮಾಡಿದೆ. ಸಣ್ಣ ಉಳಿತಾಯದಲ್ಲಿ ಅವರ ಹಸ್ತದಿಂದ ಬಹುಮಾನ ಕೊಟ್ಟಾಗ ನನಗೆ

ಅವರು ಆಶೀರ್ವಾದ ಮಾಡಿದ್ದರು. ಆಶೀರ್ವಾದ ಮಾಡಿ ಉಳಿತಾಯದ ಬಗ್ಗೆ ಒಂದು ಪುಸ್ತಕ ಬರೆಯಬೇಕು ಎಂದು ಹೇಳಿದ್ದರು. ನಾನು ಅಹಮದಾಬಾದಿಗೆ ಒಂದು ಸಲ ಹೋದಾಗ ಇನ್ನೊಂದು ವಿಶೇಷ ನಾನು ಕಂಡದ್ದು ಅಂದರೆ ಅವರಿಗೆ ಯಾರೇ ಕಾಗದ ಬರೆದರೂ ನೇರವಾಗಿ ತಮ್ಮ ಹಸ್ತದಿಂದಲೇ ಉತ್ತರ ಬರೆಯತಕ್ಕ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದರು. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ಯಾರೇ ಆಗಲಿ ಒಂದು ಪತ್ರ ಬರೆದರೆ ಮೂರು ನಾಲ್ಕು ದಿನಗಳ ಒಳಗಾಗಿ ಒಂದು ಪೋಸ್ಟ್ ಕಾರ್ಡಿನಲ್ಲಿ ಉತ್ತರ ಬರೆಯುತ್ತಿದ್ದರು. ನಾನು ಅಂತಹ ಅನೇಕ ಪೋಸ್ಟ್ ಕಾರ್ಡುಗಳನ್ನು ಸಂಗ್ರಹ ಮಾಡಿದ್ದೇನೆ. ಇಂಥ ಸರಳವಾದ ಬಹಳ ಎತ್ತರಕ್ಕೆ ಹೋಗಿರತಕ್ಕ ವ್ಯಕ್ತಿ ಎಂದರೆ ಈ ಶತಮಾನದ ಒಬ್ಬರೇ ಒಬ್ಬರು ಶ್ರೀ ಮೊರಾರ್ಜಿ ದೇಸಾಯಿಯವರು ಎಂದರೆ ತಪ್ಪಾಗಲಾರದು. ಇವತ್ತಿನ ದಿವಸ ನಮ್ಮ ನಾಯಕರು ಮತ್ತು ನಾವೆಲ್ಲರೂ ಅವರ ಅಗಲಿಕೆಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ಕೊಡಲಿ, ಅವರು ಬಿಟ್ಟು ಹೋಗಿರತಕ್ಕ ದಾರಿಯಲ್ಲಿ ನಾವು ಹೋಗಲಿಕ್ಕೆ ನಮಗೆಲ್ಲಾ ಭಗವಂತ ಶಕ್ತಿ ಕೊಡಲಿ ಎಂದು ಕೇಳಿಕೊಂಡು ತಾವು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಸಿ.ಬೈರೇಗೌಡ (ವೇಮ್‌ಗಲ್) : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಶ್ರೀ ಮೊರಾರ್ಜಿಯವರ ಅನೇಕ ಘಟನೆಗಳ ಬಗ್ಗೆ ಹೇಳಿದ್ದಾರೆ. ನಾನು ಖುದ್ದಾಗಿ ಒಂದು ಸಂದರ್ಭದಲ್ಲಿ ನೋಡಿದಂಥ ಘಟನೆಯನ್ನು ಮಾತ್ರ ಇಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. 1977 ರಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ಕೇಂದ್ರದಲ್ಲಿ ಬಂತು. ಆ ಸಂದರ್ಭದಲ್ಲಿ ನಾವು ವಿರೋಧ ಪಕ್ಷದ ಪಕ್ಷದಲ್ಲಿ ಕುಳಿತಿದ್ದೆವು ಈ ಸದನದಲ್ಲಿ ಆಗ ಮಾನ್ಯ ದೇವೆಗೌಡರು ನಾಯಕರಾಗಿದ್ದರು. ಜನತಾ ಪಕ್ಷ ಅಸ್ತಿತ್ವಕ್ಕೆ ಬಂದಿತ್ತು. ಆಗ ದೇವರಾಜ ಅರಸುರವರು ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದರು. ನಾವು ವಿರೋಧ ಪಕ್ಷದಲ್ಲಿ ಕುಳಿತು ನಮ್ಮದೇ ಆದ ಸರ್ಕಾರ ಬಂದಿದೆ ಎಂದು ಬಹಳ ಉತ್ಸಾಹದಿಂದ ಈ ಸರ್ಕಾರದ ಮೇಲೆ ಒಂದು ಚಾರ್ಜ್ ಷೀಟ್ ತೆಗೆದುಕೊಂಡು ಶ್ರೀ ಮೊರಾರ್ಜಿಯವರು ಪ್ರಧಾನ ಮಂತ್ರಿಗಳಾಗಿದ್ದ ಕಾಲದಲ್ಲಿ ನಾವು ಅವರಿಗೆ ಕೊಡುವುದಕ್ಕೆ ಹೋದೆವು. ಅವತ್ತು ಮಾನ್ಯ ದೇವೇಗೌಡರು ಇದ್ದರು. ಪಟೇಲರೂ ಸಹ ಇದ್ದರು, ರಾಮಕೃಷ್ಣ ಹೆಗ್ಗಡೆಯವರೂ ಇದ್ದರು, ಬೊಮ್ಮಾಯಿಯವರೂ ಇದ್ದರು. ಒಂದು ನಿಯೋಗ ಜನತಾ ಪಕ್ಷದ ಪರವಾಗಿ ಹೋಗಿ ಒಂದು ಚಾರ್ಜ್ ಷೀಟ್ ಕೊಟ್ಟು ಈ ಸರ್ಕಾರವನ್ನು ವಜಾ ಮಾಡಬೇಕೆಂಬ ಬೇಡಿಕೆಯನ್ನು ಅವರ ಮುಂದೆ ಇಟ್ಟೆವು. ಅವರು ಪ್ರಧಾನ ಮಂತ್ರಿಗಳಾಗಿದ್ದ ಕಾಲದಲ್ಲಿ, ಮೊದಲಿನಿಂದ ಯಾವ ಮನೆಯಲ್ಲಿ ವಾಸ ಮಾಡುತ್ತಿದ್ದರೋ, ಅದೇ ಮನೆಯಲ್ಲಿ ಇದ್ದರು. ಸುಮಾರು ಅರ್ಧಘಂಟೆ ಸಮಯ ಕಡ್ಡಿ ನಿಲ್ಲಿಸಿದರೆ ಯಾವ ರೀತಿ ನಿಂತಿರುತ್ತದೆ, ಆ ರೀತಿ ಒಂದು ಸಣ್ಣ ಕೊಠಡಿಯಲ್ಲಿ ನಮ್ಮನ್ನು ನಿಲ್ಲಿಸಿ ಅವರೂ ನಿಂತು,

ನಾವು ವಿಧವಿಧವಾಗಿ ಸರ್ಕಾರವನ್ನು ವಜಾ ಮಾಡಬೇಕೆಂದು ಹೇಳಿದೆವು. ಇಲ್ಲ, ಸಾಧ್ಯವಿಲ್ಲ ಮಾಡುವುದಿಲ್ಲ ಎಂಬ ಮಾತನ್ನು ಕಟ್ಟುನಿಟ್ಟಾಗಿ ಮೊದಲು ಏನು ಹೇಳಿದರು, ಕಡೆಯವರೆಗೆ ಅದೇ ಮಾತನ್ನು ಹೇಳಿದರು. ನಾವು ಒಂದು ಮೆಮೊರಾಂಡಂ ಕೊಟ್ಟಾಗ ಅದಕ್ಕೆ ನೇರವಾಗಿ ನಮ್ಮ ಮುಂದೆ ಉತ್ತರ ಹೇಳಿದರು. Do you think that I am going to read all these things. ಏಕೆ ಆ ಘಟನೆಯನ್ನು ನೆನಪಿಸುತ್ತೇನೆ ಎಂದರೆ ಅಂಥ ಅವಕಾಶಗಳು ಯಾರಿಗಾದರೂ ಸಿಕ್ಕಿದರೆ ಇವತ್ತು ಎಷ್ಟರಮಟ್ಟಿಗೆ ನಮ್ಮ ದೇಶದ ವ್ಯವಹಾರಗಳು ನಡೆಯುತ್ತಿವೆ ಮತ್ತು ಅವರು ನಡೆದುಕೊಂಡ ರೀತಿಗೆ ಎಷ್ಟು ಎತ್ತರದಲ್ಲಿ ಅವರು ನಡೆದುಕೊಂಡರು ಎಂಬುದನ್ನು ಉಲ್ಲೇಖ ಮಾಡುವುದಕ್ಕೋಸ್ಕರ ಈ ಘಟನೆಯನ್ನು ನಾನು ಈ ದಿವಸ ಈ ಸಭೆಯ ಮುಂದಿಡುತ್ತಿದ್ದೇನೆ. ಅದಾದಮೇಲೆ ಸುಮಾರು ಏಳೆಂಟು ತಿಂಗಳಿಗೆ ನಮ್ಮ ಅನೇಕ ನಾಯಕರು ಹೋಗಿ ರಾಜೀನಾಮೆ ಕೊಡುತ್ತೀವೆಂದು ಹೇಳಿ, ರಾಜೀನಾಮೆ ಕೊಟ್ಟಮೇಲೆ ಅವತ್ತು ಸರ್ಕಾರವನ್ನು ವಜಾ ಮಾಡತಕ್ಕ ಕೆಲಸ ಆಯಿತು. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಯಾವತ್ತೂ ಸಹ ಅವರು ಸಣ್ಣತನದಿಂದ ನಡೆದಂಥವರು ಅಲ್ಲವೇ ಅಲ್ಲ. ಅವರು ಅತ್ಯಂತ ಮೇಲ್ಮಟ್ಟದಲ್ಲಿ ನಡೆದಿರತಕ್ಕವರು ಎಂಬುದಕ್ಕೆ ಈ ಘಟನೆಯನ್ನು ಸ್ಮರಣೆ ಮಾಡಿ ಈ ಅವಕಾಶವನ್ನು ತಾವು ಒದಗಿಸಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ಮಾನ್ಯ ಸಭಾನಾಯಕರು ತಂದಿರತಕ್ಕ ನಿರ್ಣಯಕ್ಕೆ ನನ್ನ ಬೆಂಬಲ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಬಿ.ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮೊರಾರ್ಜಿ ದೇಸಾಯಿರವರು ಈ ದಿನ ನಮ್ಮನ್ನು ಆಗಲಿ ಹೋಗಿದ್ದಾರೆ. ಅನೇಕ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಮೊರಾರ್ಜಿ ದೇಸಾಯಿ ಅವರು ರಾಷ್ಟ್ರ ಪ್ರೇಮಿಗಳು, ಶಿಸ್ತಿನ ಸಿಪಾಯಿಗಳು ಆಗಿದ್ದು ಒಳ್ಳೆಯ ಆಡಳಿತಗಾರರಾಗಿದ್ದರು ಮತ್ತು ಪ್ರಾಮಾಣಿಕರಾಗಿದ್ದರು. ಯಾರು ಪ್ರಾಮಾಣಿಕತೆ, ನಿಷ್ಠೆ ಮತ್ತೆ ಅವರು ನಂಬಿರತಕ್ಕ ವಿಚಾರದಲ್ಲಿ ದೃಡವಾದಂಥ ಒಂದು ನಿರ್ಧಾರ ತೆಗೆದುಕೊಳ್ಳುತ್ತಾರೆ ಅಂಥವರನ್ನು ನಿಷ್ಠೂರವಾದಿ ಎಂದು ಹೇಳುವುದು ಸಹಜ. ಶಿಸ್ತು ಪ್ರಾಮಾಣಿಕತೆ ಯಾರಿಗಿರುತ್ತದೆ ಅವರು ಸಹಜವಾಗಿ ನಿಷ್ಠೂರವಾದಿಗಳಾಗಿರುತ್ತಾರೆ. ಅವರನ್ನು ಬಹಳ ಜನ ಒಪ್ಪುವುದಿಲ್ಲ ಸಮಾಜದಲ್ಲಿ. ಅಂಥವರು ಅಧಿಕಾರಕ್ಕೆ ಬರುವುದೂ ಕಷ್ಟ. ಸನ್ಮಾನ್ಯ ನಂಜೇಗೌಡರು ಹೇಳಿದಹಾಗೆ ಅಧಿಕಾರಕ್ಕೆ ಎರಡು ವಿಧದಲ್ಲಿ ಬರುತ್ತಾರೆ. ಒಂದು ರೀತಿಯ ರಾಜಕಾರಣಿಗಳು ಈ ಕಲುಷಿತವಾದ ವಾತಾವರಣದಲ್ಲಿ ಎಲ್ಲಾ ರೀತಿಯ ಹೊಂದಾಣಿಕೆಯನ್ನು ಮಾಡಿಕೊಂಡು ಉನ್ನತ ಸ್ಥಾನಕ್ಕೆ ಏರತಕ್ಕವರೂ ಇದ್ದಾರೆ. ಮತ್ತೊಂದು ರೀತಿಯ ರಾಜಕಾರಣಿಗಳು ತಾವು ನಂಬಿದಂಥ ಒಂದು ಸಿದ್ಧಾಂತದಲ್ಲಿ ತಾವು ನಡೆದುಕೊಂಡು ಬಂದಂಥ ಒಂದು ರೀತಿಯಲ್ಲಿ ಪ್ರಾಮಾಣಿಕತೆಯಲ್ಲಿ ನಂಬಿಕೆ ಇಟ್ಟಂಥವರು ಯಾವುದೇ ಸಂದರ್ಭದಲ್ಲೂ ಹೊಂದಾಣಿಕೆ ಮಾಡಿಕೊಳ್ಳದೆ ಹೋರಾಟ ಮಾಡಿ ಉನ್ನತ ಸ್ಥಾನಕ್ಕೆ ಏರತಕ್ಕವರು ಕೆಲವರಿದ್ದಾರೆ. ಅವರು ಬಹಳ ವಿರಳ.

ಅವರಲ್ಲಿ ನಾನು ತಿಳಿದಮಟ್ಟಿಗೆ ಮುರಾರ್ಜಿ ದೇಸಾಯಿಯವರೊಬ್ಬರೇ ಎಂದರೆ ತಪ್ಪಾಗಲಾರದು. 1969ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರಿಗೂ ಮತ್ತು ಮುರಾರ್ಜಿದೇಸಾಯಿಯವರಿಗೂ ವ್ಯತ್ಯಾಸ ಬಂದಾಗ ಅವರು ಹೊರಗಡೆ ಬಂದು ಅಂದರೆ ಗಿರಿಯವರು ಮತ್ತು ನೀಲಂ ಸಂಜೀವರೆಡ್ಡಿಯವರಿಗೆ ರಾಷ್ಟ್ರಪತಿ ಚುನಾವಣೆಯಲ್ಲಿ ವ್ಯತ್ಯೆಸ ಬಂದಾಗ ಹೊರಕ್ಕೆ ಬರುತ್ತಾರೆ. ನಂತರ ಹೋರಾಟ ಮಾಡಿ 1977ರಲ್ಲಿ ನಮ್ಮ ಅಂದಿನ ಜನತಾ ಪಕ್ಷ ರಾಷ್ಟ್ರದಲ್ಲಿ ಅಧಿಕಾರಕ್ಕೆ ಬಂದಾಗ ಪ್ರಧಾನಮಂತ್ರಿಯಾದರು. ಮತ್ತು ಯಾರು 1969ರಲ್ಲಿ ಸೋತಿದ್ದರು ರಾಷ್ಟ್ರಪತಿ ಚುನಾವಣೆಯಲ್ಲಿ ಅವರನ್ನೇ ತಂದು ಅಂದರೆ ನೀಲಂ ಸಂಜೀವ ರೆಡ್ಡಿಯವರನ್ನು ರಾಷ್ಟ್ರಪತಿಗಳಾಗಿ ಮಾಡುತ್ತಾರೆ. ಇದು ಏನು ತೋರಿಸುತ್ತದೆಂದರೆ ಅವರಲ್ಲಿದ್ದಂಥ ಒಂದ ಛಲ. ಅಂದರೆ ಏನು ನಂಬಿದ್ದಾರೆ ಅದನ್ನು ಹಠವಾದಿ ಎಂದು ಏನು ಹೇಳುತ್ತೇವೆ ಅದನ್ನು ಮಾಡಿಯೇ ತೀರತಕ್ಕ ಒಂದು ವ್ಯಕ್ತಿತ್ವ ಉಳ್ಳವರು. ಅದರಿಂದ ಅವರೇ ಪ್ರಧಾನಿಯಾದರು. ಯಾರು 1977 ರಲ್ಲಿ ಸೋತಿದ್ದರೋ ಅಂಥವರನ್ನೇ ತಂದು ರಾಷ್ಟ್ರಪತಿಯನ್ನಾಗಿ ಮಾಡಿದರು. ಅವರು ಬಹಳ ಶಿಸ್ತಿಗೆ ನಂಬಿಕೆ ಇಟ್ಟಂಥವರು. ನಾನು 1983ರಲ್ಲಿ ಈ ವಿಧಾನಸಭೆಗೆ ಪ್ರಥಮ ಬಾರಿಗೆ ಚುನಾವಣೆಯಲ್ಲಿ ಬರಬೇಕಾದರೆ ಅವರ ಆಶೀರ್ವಾದವೂ ಸಹ ನನ್ನ ಮೇಲಿದೆ. ನಾನು ಚುನಾವಣೆಗೆ ನಿಂತಾಗ ಅವರ ಪ್ರವಾಸ ಕಾರ್ಯಕ್ರಮದಲ್ಲಿ ನಮ್ಮ ಮಳವಳ್ಳಿಗೆ ಬರುವ ಕಾರ್ಯಕ್ರಮವಿತ್ತು. ಎರಡೂವರೆಗೆ ಅವರ ಕಾರ್ಯಕ್ರಮ ನಮ್ಮ ಮಳವಳ್ಳಿಯಲ್ಲಿತ್ತು. ನಾವು ತಿಳಿದುಕೊಂಡಿದ್ದೆವು ಅಂದರೆ ಸಾಮಾನ್ಯವಾಗಿ ಎಲ್ಲಾ ರಾಜಕಾರಣಿಗಳೂ ಬಹಳ ತಡವಾಗಿ ಬರುತ್ತಾರೆ ಎಂದು ಹೇಳಿ ಇನ್ನೂ ಚಪ್ಪರ ಕಟ್ಟಿರಲಿಲ್ಲ. ಒಂದು ಟೇಬಲ್ಲನ್ನೂ ಸಹ ಹಾಕಿರಲಿಲ್ಲ. ಸರಿಯಾಗಿ ಎರಡುವರೆಗೆ ಬಂದರು. ಅವರು ಪ್ರವಾಸಿ ಮಂದಿದಲ್ಲಿದ್ದಾಗ ನಾನು ಕೇಳಿಕೊಂಡೆ ಸಾರ್ ಒಂದು ನಿಮಿಷಗಳ ಕಾಲ ಪ್ರವಾಸಿ ಮಂದಿರದಲ್ಲಿ ತಾವಿರಬೇಕು, ಎಲ್ಲಾ ಸಿದ್ಧವಾಗುತ್ತದೆ ನಮ್ಮ ಸಭೆ ಎಂದು ಹೇಳಿದಾಗ ಒಪ್ಪಲಿಲ್ಲ. No No, we will straight way go to the dias ಎಂದು ಹೇಳಿದರು. ನೇರವಾಗಿ ಬಂದು ಏನೇನು ವ್ಯವಸ್ಥೆ ಇತ್ತೋ ಅದರಲೆಲ್ಲಾ ಭಾಷಣ ಮಾಡಿ ಹೋದರು. ಆವತ್ತು ವಿಧಾನಸಭೆಗೆ ಬರತಕ್ಕ ವ್ಯಕ್ತಿಯಾಗಿ ನನ್ನ ಮೇಲೆ ಬಹಳ ಪರಿಣಾಮ ಬೀರಿತು ಅವರ ವ್ಯಕ್ತಿತ್ವ. ಹೀಗಾಗಿ ಆ ಚುನಾವಣೆಯಲ್ಲಿ ನಾವು ಗೆದ್ದುಬಂದೆವು. ಮತ್ತು ಅವರು ಅಧಿಕಾರದಲ್ಲಿದ್ದಾಗ ಅನೇಕ ವಿಚಾರಗಳ ಬಗ್ಗೆ ತಮ್ಮ ನಿಲುವೇನಿತ್ತು ಅದನ್ನೆ ತೆಗೆದುಕೊಂಡರು. ಆ ರೀತಿ ಯಶಸ್ವಿಯಾದರು. ಇವತ್ತು ನಮ್ಮ ರಾಷ್ಟ್ರಪ್ರೇಮಿಗಳಾಗಿ ಸ್ವಾತಂತ್ರ್ಯ ಹೋರಾಟಗಾರರಾಗಿ ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಶಿಸ್ತಿನ ಸಿಪಾಯಿಯಾಗಿ ನಮ್ಮ ಮುರಾರ್ಜಿ ದೇಸಾಯಿಯವರು ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಎಲ್ಲರೂ ಪಾಲನೆ ಮಾಡತಕ್ಕ ಒಂದು ವ್ಯಕ್ತಿಯಾಗಿ ಹೋಗಿದ್ದಾರೆ. ಅವರು ಅವರ ಜೀವನದಲ್ಲಿ ನಡೆದುಕೊಂಡು ಬಂದಂಥ ರೀತಿ, ಮಾಡಿದಂಥ ಕೆಲಸಗಳು ನಮ್ಮೆಲ್ಲರಿಗೂ ಸಹ ಆದರ್ಶವಾಗಲಿ, ಮಾರ್ಗದರ್ಶಿಯಾಗಲಿ ಎಂದು ನಾನು ಹಾರೈಸುತ್ತಿದ್ದೇನೆ. ಮತ್ತೆ ಅವರ ಹೆಸರಿನಲ್ಲಿ ನಮ್ಮ ಸರ್ಕಾರ

ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಬಹಳ ಅರ್ಥಪೂರ್ಣವಾಗಿದೆ ಎಂದು ಹೇಳಿ ನಮ್ಮ ಸಭಾನಾಯಕರು ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ ತಾವು ಎರಡು ಮಾತುಗಳನ್ನು ಆಡುವುದಕ್ಕೆ ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

ಶ್ರೀ ಚಂದ್ರಕಾಂತ ಜಿ ಬೆಲ್ಲದ್ : ಸನ್ಮಾನ್ಯ ಅಧ್ಯಕ್ಷರೆ, ರಾಷ್ಟ್ರದ ಒಬ್ಬ ಶ್ರೇಷ್ಠ ಅಪ್ರತಿಮ ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರರು ಹೌದು, ಒಬ್ಬ ಶಿಸ್ತಿನ ದಕ್ಷ ಪ್ರಧಾನಮಂತ್ರಿಗಳಾಗಿ ಇಡೀ ರಾಷ್ಟ್ರದ ಸಮಾಜಸೇವಕರಾದಂಥ ರಾಜಕಾರಣಿಗಳಾದಂಥ ನಮ್ಮೆಲ್ಲರಿಗೆ ಆದರ್ಶದ ಒಂದು ದಾರಿಯನ್ನು ತೋರಿಸಿದಂಥ ಒಬ್ಬ ಮಹಾನ್ ನಾಯಕರನ್ನು ಇವತ್ತು ಕಳೆದುಕೊಂಡು ರಾಷ್ಟ್ರ ಬಹು ದೊಡ್ಡ ದುಃಖದಲ್ಲಿ ಬಿದ್ದಿದೆ. ಒಬ್ಬ ಶ್ರೇಷ್ಠ ನಾಯಕ ಹೇಗೆ ತನ್ನ ದೂರದೃಷ್ಟಿಯಿಂದ ಈ ರಾಷ್ಟ್ರವನ್ನು ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತಾನೆ ಎಂಬುದಕ್ಕೆ ಮುರಾರ್ಜಿಯವರು ಒಬ್ಬರು ನಿದರ್ಶನ ಮಾಡಿ ತೋರಿಸಿದ್ದಾರೆ. ಅವರು ಈ ರಾಷ್ಟ್ರದ ಪೂಜ್ಯ ಮಹಾತ್ಮ ಗಾಂಧೀಜಿಯವರ ಆದರ್ಶಗಳನ್ನಿಟ್ಟುಕೊಂಡು ತಮ್ಮ ಬದುಕಿನಲ್ಲಿ ನಡೆದುಬಂದಂಥವರು. ಅದೇ ರೀತಿ ವಲ್ಲಭಭಾಯಿ ಪಟೇಲರ ದಿಟ್ಟತನವನ್ನು, ಶಿಸ್ತನ್ನು ಒಂದು ಜಿಗುಟುತನವನ್ನು, ಹಠಮಾರಿತನವನ್ನು ಇಟ್ಟುಕೊಂಡು ಬಂದಂಥ ಶ್ರೇಷ್ಠ ರಾಜಕಾರಣಿ. ಆ ದೃಷ್ಟಿಯಿಂದ ಲಾಲ್ ಬಹದ್ದೂರ್ ಶಾಸ್ತ್ರಿಯವರ ನಂತರ ಈ ದೇಶದ ಪ್ರಧಾನಿಯಾಗುವಂಥ ಒಂದು ಅವಕಾಶವನ್ನು ಅವರು ಕಳೆದುಕೊಂಡಿದ್ದರು ಎಂಬುದನ್ನು ನಾವು ಇಲ್ಲಿ ನೆನೆಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಸನ್ಮಾನ್ಯ ಲಾಲ್ ಬಹದ್ದೂರ್ ಶಾಸ್ತ್ರಿಯವರ ನಂತರ ಇವರೇ ಈ ರಾಷ್ಟ್ರದ ಪ್ರಧಾನಮಂತ್ರಿಗಳಾಗಬೇಕಾಗಿತ್ತು. ಆದರೆ ಇವರು ಒಬ್ಬ ಹಠಮಾರಿ ಎನ್ನುವಂಥ ದೃಷ್ಟಿಯಿಂದ ಆ ಒಂದು ಅವಕಾಶವನ್ನು ಕಳೆದುಕೊಂಡಿದ್ದರು. ಆದರೆ ಮುಂದೆ ಬಂದಂಥ ಅವರ ಯಾವತ್ತೂ ರಾಜಕೀಯ ಜೀವನದಲ್ಲಿ ತಾವು ಹಿಡಿದಂಥ ಒಂದು ಫಲವನ್ನು ಬಿಡದೆ ಈ ದೇಶದಲ್ಲಿ ಎಲ್ಲಾ ರಾಜಕಾರಣಿಗಳಿಗೆ ಈ ದೇಶ ಕಟ್ಟುವಂಥ ಜನತೆಗೆ ಒಬ್ಬ ಪ್ರಾಮಾಣಿಕ, ದಕ್ಷ ಮತ್ತು ಶಿಸ್ತಿನ ರಾಜಕಾರಣಿ ಎಂಬುದನ್ನು ಅವರು ತಮ್ಮ ಉಡುಗೆಯನ್ನು ಬಿಟ್ಟುಹೋಗಿದ್ದಾರೆ. ಇಡೀ ದೇಶವನ್ನು ಕಟ್ಟುವಂಥ ಎಲ್ಲಾ ಜನಾಂಗಕ್ಕೆ ಒಬ್ಬ ಆದರ್ಶವಾಧ ರಾಜಕಾರಣಿ. ಆ ರಾಜಕಾರಣಿಯ ಆದರ್ಶಗಳನ್ನು ನಾವೆಲ್ಲರೂ ಇವತ್ತು ಇಟ್ಟುಕೊಂಡು ನಮ್ಮ ಜೀವನದಲ್ಲಿ ಈ ರಾಷ್ಟ್ರ ಕಟ್ಟುವ ರಾಜ್ಯ ಕಟ್ಟುವ ರಾಜ್ಯ ಕಟ್ಟುವ ದೇಶವನ್ನು ಒಂದು ಅಭಿವೃದ್ಧಿ ಪಥದಲ್ಲಿ ಒಯ್ಯುವಂಥ ಒಂದು ಕಾರ್ಯದಲ್ಲಿ ನಾವು ತೊಡಗುವುದರಿಂದ ಅವರಿಗೆ ನಾವು ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿದೆ ಎಂದು ಹೇಳಿ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ತಮಗೆ ಸರಿ ಎಂದು ಕಂಡಂಥ ವಿಷಯದಲ್ಲಿ ಬಿಗಿ ನಿಲುವನ್ನು ತಾಳುವುದು ಅವರ ವ್ಯಕ್ತಿತ್ವದ ವೈಶಿಷ್ಟ್ಯ. ಅಧಿಕಾರ ರಾಜಕಾರಣದಲ್ಲಿ ತೊಡಗಿದಂಥ

ಯಾವುದೇ ರಾಜಕಾರಣಿ ಬಿಗಿ ನಿಲುವು ತಾಳುವುದರಿಂದ ಅಧಿಕಾರ ಗಳಿಸಿ ಕೊಳ್ಳುವುದಕ್ಕಾಗಲೀ ಅನುಕೂಲವಾಗುವುದಿಲ್ಲ. ಆದರೆ ಪರಿಣಾಮಗಳನ್ನು ಯೋಚನೆ ಮಾಡದೆ ತಾವು ನಂಬಿದಂಥ ಆದರ್ಶಗಳನ್ನು ಗಟ್ಟಿಯಾಗಿ ಪ್ರತಿಪಾದನೆ ಮಾಡುವಂಥ ಒಂದು ವ್ಯಕ್ತಿತ್ವ ಅವರದು. ನೇರ ನುಡಿಗೆ ಹೆಸರಾದವರು. ಅವರು ರಾಜಕಾರಣದಲ್ಲಿ ತಂತ್ರವನ್ನು ರೂಪಿಸುತ್ತಾ ಇರಲಿಲ್ಲ. ತಂತ್ರಗಾರಿಕೆಯ ರಾಜಕಾರಣದಿಂದ ಬಹಳ ದೂರ ಇದ್ದಂಥ ವ್ಯಕ್ತಿ. ಅವರ ಸರಳ ಜೀವನ ಮತ್ತು ಪ್ರಧಾನವಾಗಿ ಅವರು ನಂಬಿಕೊಂಡಿದ್ದಂಥ ನೈತಿಕ ಮೌಲ್ಯಗಳೇನಿತ್ತು ಅವು ನಮ್ಮೆಲ್ಲರಿಗೂ ಕೂಡ ಮೌಲ್ಯಗಳು ಕುಸಿಯುತ್ತಿರುವ ಇಂದಿನ ರಾಜಕಾರಣದಲ್ಲಿ ಆದರ್ಶಪ್ರಾಯವಾಗಿ ಉಳಿಯುತ್ತದೆಂದು ನಾನು ನಂಬಿದ್ದೇನೆ. ಸದನದ ಎಲ್ಲ ಸದಸ್ಯರುಗಳು ಮುಖಂಡರುಗಳು ತಾವು ಏನು ತಮ್ಮ ಭಾವನೆಗಳನ್ನು ವ್ಯಕ್ತಮಾಡಿದ್ದೀರಿ ತಮ್ಮ ಜೊತೆಗೆ ನಾನೂ ಇದ್ದೇನೆ ಎಂದು ಹೇಳಿ ಮೃತರ ಗೌರವಾರ್ಥ ಎಲ್ಲಾ ಮಾನ್ಯ ಸದಸ್ಯರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

ಮೃತರ ಗೌರವಾರ್ಥ ಒಂದು ನಿಮಿಷ

(ಸಭೆ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿ ಶ್ರದ್ಧಾಂಜಲಿಯನ್ನರ್ಪಿಸಿತು)

ಅಧ್ಯಕ್ಷರು : ದಿವಂಗತರ ಕುಟುಂಬವರ್ಗದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಕಳುಹಿಸಿಕೊಡಲಾಗುವುದು. ಸಭೆಯನ್ನು ಬರುವ ಸೋಮವಾರ* 17ನೇ ತಾರೀಖು ಬೆಳಿಗ್ಗೆ 11 ಗಂಟೆಗೆ ಸೇರುವುದಕ್ಕೆ ಈಗ ಮುಂದೂಡಲಾಗಿದೆ.

(ಸದನವು ರಾತ್ರಿ 7 ಗಂಟೆ 20 ನಿಮಿಷಕ್ಕೆ ಸಭೆಯನ್ನು ಮುಂದೂಡಿ ಮತ್ತೆ ದಿನಾಂಕ 17-4-1995 ರಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಲಾಯಿತು)

(* ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)